ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜು
College Code : SU 278
ಗಣಿತ್ ನಗರ, ಕುಕ್ಕುಂದೂರು, ಕಾರ್ಕಳ
ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್‌ನ ಆಡಳಿತಕ್ಕೊಳಪಟ್ಟಿದೆ
ಸಂಚಿಕೆ 29

# ಜ್ಞಾನಸುಧಾ ಪತ್ರಿಕೆ

ಸಂತೃಪ್ತ ಸಮಾಜ ನಿರ್ಮಾಣದ ಕನಸುಗಳೊಂದಿಗೆ

**ಪುಟ-1**
- '2021' ಜ್ಞಾನಸುಧಾಕ್ಕೆ ದಶಕದ ಸಂಭ್ರಮ
- Result Abstract of Karkala Jnanasudha Pre-University College, Ganit Nagar

**ಪುಟ-2**
- Karkala Jnanasudha Students who joined MBBS Through NEET-2020

**ಪುಟ-3**
- Karkala Jnanasudha Students with Ranks Below 5000 in KCET-2020

**ಪುಟ-4**
- Karkala Jnanasudha Students with Ranks Below 5000 in KCET-2020
- ಜ್ಞಾನಸುಧಾದಲ್ಲಿ ರೂಪು ತಳೆದ ಮೂಡಲಗಿಯ ಮುತ್ತುಗಳು
- ರಾಜ್ಯ ಮಟ್ಟದ ರಿಪಬ್ಲಿಕ್ ಡೇ ಪೆರೇಡ್‌ಗೆ ಕು.ವೃದ್ಧಿ ಶೆಟ್ಟಿ
- ಶ್ರೀ ಪಿ. ವಸಂತ ಆಚಾರ್ ಅವರಿಗೆ ಸನ್ಮಾನ

**ಪುಟ-5**
- ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರ ದಿನಾಚರಣೆ ಸಂಭ್ರಮ
- ಸಾಧಕರಿಗೆ ಸನ್ಮಾನ ಹಾಗೂ ಹದಿನೆಂಟು ಲಕ್ಷದ ಮೂವತ್ತು ಸಾವಿರ ರೂಪಾಯಿ ವಿದ್ಯಾರ್ಥಿ ವೇತನ ವಿತರಣೆ
- ರಾಷ್ಟ್ರದ ರಕ್ಷಣಾ ನಿಧಿಗೆ ತೊಂಬತ್ತಾರು ಸಾವಿರ ರೂಪಾಯಿ

**ಪುಟ-6**
- ಜ್ಞಾನಸುಧಾದಲ್ಲಿ NEET ಲಾಂಗ್‌ಟರ್ಮ್ ತರಗತಿಗಳು ಆರಂಭ
- ಜ್ಞಾನಸುಧಾದಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್‌ನ ಪ್ರಾರಂಭಕ್ಕೆ ಮುನ್ನುಡಿ
- ರಾಷ್ಟ್ರ ರಕ್ಷಣಾ ನಿಧಿಗೆ ಜ್ಞಾನಸುಧಾದ ಕೊಡುಗೆ

**ಪುಟ-7**
- ಹೊಸ ಹರುಷದೊಂದಿಗೆ ಹೊಸ ವರುಷ
- ಸುಸಜ್ಜಿತ ರಸಾಯನ ಶಾಸ್ತ್ರ ಪ್ರಯೋಗಾಲಯ ಉದ್ಘಾಟನೆ
- ಜ್ಞಾನಸುಧಾದ ರಸಾಯನ ಶಾಸ್ತ್ರ ಪ್ರಾಧ್ಯಾಪಕ ಶ್ರೀ ಪ್ರಜ್ವಲ್ ಕುಲಾಲ್ ಅವರಿಗೆ ಯುವವಿಜ್ಞಾನಿ ಪ್ರಶಸ್ತಿ ಹಾಗೂ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳಿಂದ ಸನ್ಮಾನ
- ಚಿತ್ರಕಲೆ ಮತ್ತು ಕವನ

**ಪುಟ-8**
- KUDOS TO CNS ASHWIN M RAO
- ಎನ್.ಸಿ.ಸಿ. ಉದ್ಘಾಟನಾ ಸಮಾರಂಭ
- ಸಂಪಾದಕೀಯ

## '2021' ಜ್ಞಾನಸುಧಾಕ್ಕೆ ದಶಕದ ಸಂಭ್ರಮ

10th ANNIVERSARY

ಕಲ್ಲು ಕೋರೆಗಳಿಂದ ತುಂಬಿದ್ದ ಭೂಮಿ 2021ರಲ್ಲಿ ದಶಕ ಕಳೆಯುವುದರೊಳಗಾಗಿ ಹಸಿರುಟ್ಟು ಮೈತುಂಬಿಕೊಂಡದ್ದಷ್ಟೇ ಅಲ್ಲ, ಈ ಮಣ್ಣಿನಲ್ಲಿ ನೆಲೆಗೊಂಡ ಶ್ರೀ ಮಹಾಗಣಪತಿ ಹಾಗೂ ನಾಗದೇವರ ಕೃಪೆಯಿಂದ 193 ಎಂ.ಬಿ.ಬಿ.ಎಸ್. ಸೀಟುಗಳು, J.É.E.Advanced ನಿಂದ ಒಬ್ಬ ವಿದ್ಯಾರ್ಥಿ I.I.T. ಗೆ ಆಯ್ಕೆ, K.C.E.T. ಇಂಜಿನಿಯರಿಂಗ್‌ನಿಂದ ರಾಜ್ಯದ ಪ್ರತಿಷ್ಠಿತ ಕಾಲೇಜುಗಳಿಗೆ ಪ್ರವೇಶ ಪಡೆದದ್ದೂ ಒಳಗೊಂಡಂತೆ, ರಾಷ್ಟ್ರ ಮಟ್ಟದ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಚಿನ್ನದ ಪದಕದ ಗರಿಯೂ ಸಂಸ್ಥೆಗೆ ದೊರಕಿದೆ. ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿಯ ಈವರೆಗಿನ ಫಲಿತಾಂಶ ನಮ್ಮ ಸಾಧನೆಗೆ ಹಿಡಿದ ಕನ್ನಡಿಯಂತಿದೆ.

## RESULT ABSTRACT OF KARKALA JNANASUDHA PRE-UNIVERSITY COLLEGE, GANIT NAGAR

| YEAR | 2012-13 | 2013-14 | 2014-15 | 2015-16 | 2016-17 | 2017-18 | 2018-19 | 2019-20 |
|---|---|---|---|---|---|---|---|---|
| No. of students | 147 | 258 | 272 | 321 | 391 | 440 | 518 | 513 |
| I PUC RESULT | 100% | 100% | 100% | 100% | 100% | 100% | 100% | 100% |
| II PUC RESULT | 98.60% | 98.50% | 98.90% | 99.70% | 99.23% | 100% | 99.61% | 99.80% |
| No. of Distinctions | 55 | 159 | 141 | 211 | 267 | 292 | 326 | 410 |
| No. of Hundreds | 33 | 99 | 51 | 112 | 157 | 147 | 211 | 264 |

### TOPPERS OF 2019-20 SCIENCE



JAGRUTHI K J
Total : 591
Avg : 98.50%
Sn | P | B
100



B SATHVIK SHENOY
Total : 589
Avg : 98.17%
Sn | M | Cs
100



AKSHATHA
Total : 588
Avg : 98%
Sn | M | Cs
100



SADIK PEERSAB NADAF
Total : 588
Avg : 98%
M | Cs
100

### TOPPERS OF 2019-20 COMMERCE



B RITHIKA KAMATH
Total : 594
Avg : 99%
Sn| Bs | Acc | St
100



RAKSHITHA
Total : 592
Avg : 98.67%
Bs | Acc | St
100



NAGARAJA PRABHU K
Total : 590
Avg : 98.33%
Sn | Bs | Acc | St
100



LAVANYA U K
Total : 589
Avg : 98.17%
K | Bs | Acc | St
100

### SSLC TOPPERS OF 2019-20



SHRILAKSHMI P NAIK
Total : 623
Avg : 99.68%
San - 125, Kan-100, Mat - 100, S.Sci-100



AKHIL U VAGLE
Total : 622
Avg : 99.52%
Kan - 100, Hin-100, Mat - 100, Sci-100, S.Sci-100



ANISH R JOISHY
Total : 622
Avg : 99.52%
San - 125, Kan-100, Mat - 100, S.Sci-100



SATHWIK PRABHU
Total : 621
Avg : 99.36%
San - 125, Eng-100, Mat - 100, S.Sci-100

# KARKALA JNANASUDHA STUDENTS WHO JOINED MBBS THROUGH NEET-2020



641 **MAYUR R ATHREYAS**
NEET Percentile : **99.58**
Mysore Medical College, Mysore

632 **MANISHA C POOJARY**
NEET Percentile : **99.41**
Bangalore Medical College, Bangalore

613 **REVANNA M KOUJALAGI**
NEET Percentile : **98.94**
Karnataka Institute of Medical Sciences, Hubli

608 **AKSHATHA**
NEET Percentile : **98.79**
Kasturba Medical College, Mangalore.

598 **ARYA C D**
NEET Percentile : **98.46**
Shimoga Institute of Medical Sciences, Shimoga

597 **LIKHIT AJJAPPA MANNIKERI**
NEET Percentile : **98.43**
Karnataka Institute of Medical Sciences, Hubli

596 **PRAVADI H P**
NEET Percentile : **98.39**
Shimoga Institute of Medical Sciences, Shimoga



596 **SURYA M G**
NEET Percentile : **98.39**
Mandya Institute of Medical Sciences, Mandya

595 **ANURAG INCHAL**
NEET Percentile : **98.35**
Belgaum Institute of Medical Sciences, Belgaum

594 **NITIN R PATGAR**
NEET Percentile : **98.32**
Shimoga Institute of Medical Sciences, Shimoga

585 **PRATHVI NAYAK**
NEET Percentile : **97.97**
Shimoga Institute of Medical Sciences, Shimoga

584 **CHINTHAN D P**
NEET Percentile : **97.93**
Shimoga Institute of Medical Sciences, Shimoga

581 **TEJASWINI KAMATH**
NEET Percentile : **97.81**
A.J.Institute of Medical Sciences, Mangalore

577 **AQSA FARHEEN**
NEET Percentile : **97.64**
Hassan Institute of Medical Sciences, Hassan



577 **SANTRUPTH C SHETTY**
NEET Percentile : **97.64**
Shimoga Institute of Medical Sciences, Shimoga

570 **S B KARTHIK**
NEET Percentile : **97.34**
Koppal Institute of Medical Sciences, KOPPAL

570 **RAHUL J SHETTY**
NEET Percentile : **97.34**
Karwar Institute of Medical Science, KARWAR

567 **SANGAMESH**
NEET Percentile : **97.21**
Hassan Institute of Medical Sciences, Hassan

564 **SUSHIK S GOWDA**
NEET Percentile : **97.08**
Kodagu Institute of Medical Sciences, Madikeri

560 **KEERTI GAJANAN HEGDE**
NEET Percentile : **96.89**
Chamarajanagar Institute of Medical Science, Chamarajanagar

557 **BHUVI SHETTY**
NEET Percentile : **96.74**
A.J.Institute of Medical Sciences, Mangalore



556 **JISHMA JOSHY**
NEET Percentile : **96.69**
Kodagu Institute of Medical Sciences,MADIKERI

554 **SUJAN KUMAR M S**
NEET Percentile : **96.60**
Jaya Jagadguru Murugharajendra Medical College, Davangere

551 **SADIK PEERSAB NADAF**
NEET Percentile : **96.45**
Gulbarga Institute of Medical Sciences, GULBARGA

548 **HATTI AKSHAY DONDAPPA**
NEET Percentile : **96.30**
Jaya Jagadguru Murugharajendra Medical College, Davangere

547 **HRUTHVIK K T**
NEET Percentile : **96.24**
Gadag Institute of Medical Sciences, GADAG

537 **GAGAN**
NEET Percentile : **95.73**
Karwar Institute of Medical Science, UTTARA KANNADA

533 **HARSHITHA K.LOKESH**
NEET Percentile : **95.52**
Karwar Institute of Medical Science, KARWAR



532 **A SHREYAS**
NEET Percentile : **95.47**
Shimoga Institute of Medical Sciences, Shimoga

532 **NIDHI R CHITRAPUR**
NEET Percentile : **95.47**
Bidar Institute of Medical Sciences,Udgir Road, Bidar

531 **SHARADHI S HEGDE**
NEET Percentile : **95.41**
Karwar Institute of Medical Science, KARWAR

530 **PRATHIKSHA BHAT**
NEET Percentile : **95.35**
Srinivasa Institute of Medical Research Center, Mangalore

529 **KEDAR K SHANBHAG**
NEET Percentile : **95.30**
S. Nijalingappa Medical College and Research Centre, Bagalkot

522 **MANOHARA H G**
NEET Percentile : **94.92**
K.S.Hegde Medical Academy, Mangalore

520 **ANISH**
NEET Percentile : **94.80**
Karwar Institute of Medical Science, KARWAR



506 **K PRAMOD**
NEET Percentile : **93.99**
Kanachur Institute of Medical Sciences and Research Centre, MANGALORE

**SRIHARI K**
East Point College of Medical Sciences and Research Center, Bangalore

**SUDHANVA K G**
Dr. Chandramma Dayananda Sagar Institute of Medical Education, Ramanagara

**NIYATHI K.SHETTY**
Kasturba Medical College, Mangalore.

**STHITHI SHETTY**
Srinivasa Institute of Medical Research Center, Mangalore

**VRADDHI**
Srinivasa Institute of Medical Research Center, Mangalore

**PREKSHA U JAIN**
Srinivasa Institute of Medical Research Center, Mangalore



**SAHITHYA SURESH SHETTY (Mgt.)**
A J Institute of Medical Sciences Mangalore

**SAMARTHDEEP S J (Mgt.)**
A J Institute of Medical Sciences Mangalore

**BHAVANA REDDY (Mgt.)**
Akash Institute of Medical Sciences Bengaluru

**WITH JOINT EFFORT OF JNANASUDHA ONLINE ENTRANCE EXAMINATION TRAINING INSTITUTE**



588 **PRAJWAL K Y**
Mandya Institute of Medical Sciences, Mandya

546 **NIDDODI SINCHANA BHAT**
Hassan Institute of Medical Sciences, Hassan

**NAVYA PRABHU (Mgt.)**
K V G Medical College, Sullia

# KARKALA JNANASUDHA STUDENTS WITH RANKS BELOW 5000 IN KCET-2020



**MAYUR R ATHREYAS**
BNYS Rank : **40**
Vet. Scie. Rank : **85**
BSc. Agri Rank : **101**
B.Phar. &D.Phar. Rank : **138**
K-CET Eng. Rank : **608**
**(MBBS)**

**AKSHATHA**
BNYS Rank: **74**
Vet. Sci. Rank : **89**
B.Sc. Agri. Rank : **113**
B.Phar. &D.Phar. Rank: **177**
K-CET Eng. Rank : **780**
**(MBBS)**

**YASHAS KAMATH**
K-CET Eng. Rank : **103**
**(Manipal Institute of Technology)**

**SURYA M G**
B.Sc. Agri. Rank : **121**
Vet. Sci. Rank: **183**
BNYS Rank: **200**
B.Phar. &D.Phar. Rank: **281**
K-CET Eng. Rank : **590**
**(MBBS)**

**SEEMA S TENDULKAR**
B.Sc. Agri. Rank: **178**
BNYS Rank: **320**
K-CET Eng. Rank : **614**
**(R V College of Engineering Bengaluru)**

**ANURAG INCHAL**
B.Sc. Agri. Rank: **199**
BNYS Rank : **215**
Vet. Sci. Rank : **307**
B.Phar. &D.Phar. Rank: **488**
K-CET Eng. Rank : **839**
**(MBBS)**

**SHIVA REDDY C**
K-CET Eng. Rank : **200**
**(R V College of Engineering Bengaluru)**



**ARYA C D**
B.Sc. Agri. Rank: **258**
BNYS Rank: **311**
VET.SCI. Rank : **469**
K-CET Eng. Rank : **999**
**(MBBS)**

**NITIN R PATGAR**
B.Sc. Agri. Rank: **338**
BNYS Rank: **492**
K-CET Eng. Rank : **1115**
**(MBBS)**

**RAHUL J SHETTY**
VET.SCI. Rank: **370**
B.Sc. Agri. Rank: **383**
BNYS Rank: **461**
K-CET Eng. Rank : **1517**
**(MBBS)**

**ANANTH RAVIRAJ UDUPA**
K-CET Eng. Rank : **416**
**(R V College of Engineering Bengaluru)**

**PRAVADI H P**
BNYS Rank: **466**
B.Sc. Agri. Rank: **482**
K-CET Eng. Rank : **1838**
**(MBBS)**

**S B KARTHIK**
B.Sc. Agri. Rank: **470**
K-CET Eng. Rank : **1435**
**(MBBS)**

**NIDHI RAMACHANDRA CHITRAPUR**
B.Sc. Agri. Rank: **475**
K-CET Eng. Rank : **1487**
**(MBBS)**



**SATHVIK ACHARYA**
K-CET Eng. Rank : **479**
**(R V College of Engineering Bengaluru)**

**AMOGHA H G**
K-CET Eng. Rank : **962**
**(M S Ramaiah Institute of Technology Bengaluru)**

**AMAN CLEMENT ARANHA**
K-CET Eng. Rank : 976
(M S Ramaiah Institute of Technology Bengaluru)

**GAGAN D**
M-**100**
K-CET Eng. Rank : **1384**
(B M S College of Engineering, Bangalore)

**ABHISHEK RAJARAM HEGDE**
Cs-**100**
K-CET Eng. Rank :**1579**
(SS Science and Technology University, Mysore)

**SUSHIK S GOWDA**
K-CET Eng. Rank :**1699**
(MBBS)

**LIKHIT AJJAPPA MANNIKERI**
M-**100**
K-CET Eng. Rank :**1775**
(MBBS)



**SANGAMESH**
C-**100**, M-**100**
K-CET Eng. Rank :**1778**
(MBBS)

**PRATHAM NAIK**
M-**100**
K-CET Eng. Rank :**1835**
(Veterinary College, Shimoga)

**MANISHA C POOJARY**
M-**100** B-**100**
K-CET Eng. Rank :**1906**
(MBBS)

**SUJAN RAO R**
M-**100**
K-CET Eng. Rank : **2046**
(P E S University, Bangalore)

**B SATHVIK SHENOY**
M-**100** Cs-**100**
K-CET Eng. Rank : **2055**
(JSS Engineering College, Mysore)

**SUJAN KUMAR M S**
B-**100**
K-CET Eng. Rank : **2115z**
(MBBS)

**KEDAR K SHANBHAG**
P-**100** M-**100**
K-CET Eng. Rank : **2361**
(MBBS)



**SADIK PEERSAB NADAF**
M-**100** B-**100**
K-CET Eng. Rank : **2428**
(MBBS)

**CHINTHAN D P**
P-**100** B-**100**
K-CET Eng. Rank : **2466**
(MBBS)

**SHRUJAN**
P-**100**
K-CET Eng. Rank : **2488**
(P E S University, Bangalore)

**BHUVI SHETTY**
K-CET Eng. Rank : **2529**
(MBBS)

**REVANNA M KOUJALAGI**
K-CET Eng. Rank : **2532**
(MBBS)

**JISHMA JOSHY**
M-**100** B-**100**
K-CET Eng. Rank : **2665**
(MBBS)

**K PRAMOD**
M-**100**
K-CET Eng. Rank : **2763**
(MBBS))



**SHREYA SUNIL PATIL**
M-**100**
K-CET Eng. Rank : **2802**

**KEERTI GAJANAN HEGDE**
P-**100**
K-CET Eng. Rank : **2936**
(MBBS)

**PRATHVI NAYAK**
M-**100**
K-CET Eng. Rank : **3062**
(MBBS)

**SUDEEPA N S**
M-**100**
K-CET Eng. Rank : **3081**
(P E S University, Bangalore)

**THRILOK M S**
K-CET Eng. Rank : **3357**
(Agricultural University GKVK Bengaluru)

**HRUTHVIK K T**
M-**100**
K-CET Eng. Rank : **3772**
(MBBS)

**ANISH BIRADAR**
M-**100**
K-CET Eng. Rank : **3808**
(Veterinary College, Vinobha Nagar, Shimogga)

# KARKALA JNANASUDHA STUDENTS WITH RANKS BELOW 5000 IN KCET-2020



**GAGAN**
P-**100** M-**100**
K-CET Eng. Rank : **3871**
(MBBS)



**ANISH**
P-**100**
K-CET Eng. Rank : **3902**
(MBBS)



**JAGRUTHI K J**
P-**100** B-**100**
K-CET Eng. Rank : **3905**
(P E S University, Bangalore)



**B T PREETHAM**
M- **100**
K-CET Eng. Rank : **3938**



**HATTI AKSHAY DONDAPPA**
B-**100**
K-CET Eng. Rank : **3939**
(MBBS)



**SUVITH KUMAR**
M-**100**
K-CET Eng. Rank : **3967**
(NMAM Institute Of Tech. Nitte Karkala)



**PAVAN K SHETTY**
K-CET Eng. Rank : **4025**
(University of Agriculture Science Bengaluru)



**RAMYA N**
K-CET Eng. Rank : **4096**



**SHARADHI S HEGDE**
K-CET Eng. Rank : **4117**
(MBBS)



**DINESH KUMAR G**
M-**100** Cs-**100**
K-CET Eng. Rank : **4126**
(B M S College of Engineering, Bangalore)



**GIRISH SOMALINGAPPA NAVALGUND**
K-CET Eng. Rank : **4181**
(College of Agriculture UAS Dharwad)



**SANJANA JAIN**
Cs -**100**
K-CET Eng. Rank : **4309**
(NMAM Institute of Tech. Nitte Karkala)



**KHUSHI K**
M-**100**
K-CET Eng. Rank : **4347**
(MBBS)



**PRATHIK SAJJAN K S**
M-**100**
K-CET Eng. Rank : **4402**
(National Inst. of Technology Mysore)



**PAVAN B SHIRAVANTI**
M-**100**
K-CET Eng. Rank : **4414**
(College of Agriculture UAS Dharwad)



**SHRESTA C**
K-CET Eng. Rank : **4438**
(Veterinary College Vinobha Nagar Shimoga)



**SANTRUPTH C SHETTY**
C-**100**
K-CET Eng. Rank : **4492**
(MBBS)



**LIKHITH S**
K-CET Eng. Rank : **4546**



**PRATHIKSHA BHAT**
M-**100**
K-CET Eng. Rank : **4840**
(MBBS)



**SUDHANVA ANANT JOSHI**
K-CET Eng. Rank : **4877**



**NIYATHI K.SHETTY**
M-**100**
K-CET Eng. Rank : **4902**
(MBBS)



**A SHREYAS**
M-**100**
K-CET Eng. Rank : **4992**
(MBBS)

## ಜ್ಞಾನಸುಧಾದಲ್ಲಿ ರೂಪು ತಳೆದ ಮೂಡಲಗಿಯ ಮುತ್ತುಗಳು

ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತಣ ಸಂಬಂಧವಯ್ಯಾ? ವಚನದ ಸಾಲುಗಳು ಅಕ್ಷರಶಃ ದಿಟ. ಉತ್ತರಕರ್ನಾಟಕ ಭಾಗದಲ್ಲಿರುವ ಮೂಡಲಗಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿರುವ ಮಾದರಿ ವ್ಯಕ್ತಿತ್ವ ಶ್ರೀಯುತ ಅಜ್ಜಪ್ಪ ಚೂನಪ್ಪ ಮನ್ನಿಕೇರಿಯವರ ನಾಲ್ವರು ಮಕ್ಕಳೂ ಗಣಿತ ನಗರದ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವಕಾಲೇಜಿನಲ್ಲಿ ವಿದ್ಯಾರ್ಜನೆಗೈದು ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಪ್ರಸ್ತುತ ಪ್ರಖ್ಯಾತ ಕಾಲೇಜುಗಳಲ್ಲಿ ಎಂ.ಬಿ.ಬಿ.ಎಸ್ ವ್ಯಾಸಂಗ ನಡೆಸುತ್ತಿರುವುದು ನಿಜವಾಗಿಯೂ ಬಹಳಷ್ಟು ಸಂತಸದ ವಿಚಾರ.ತಮ್ಮ ಮಕ್ಕಳು ವೈದ್ಯರಾಗಿ ಸಮಾಜ ಸೇವೆ ಮಾಡಬೇಕೆನ್ನುವುದು ಅನೇಕ ಪೋಷಕರ ಆಶಯ.ಅಂತಹ ಸುಂದರ ಕನಸು ಕಂಡು ನನಸಾಗಿಸುವ ಹೆಜ್ಜೆಯಿಟ್ಟ ಎ.ಸಿ.ಮನ್ನಿಕೇರಿಯವರು ಭರವಸೆ ಇಟ್ಟದ್ದು ಡಾ.ಸುಧಾಕರ ಶೆಟ್ಟಿಯವರ ಸಾರಥ್ಯದ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವಕಾಲೇಜಿನ ಶಿಸ್ತು, ಗುಣಾತ್ಮಕ ಶಿಕ್ಷಣ, ವಿದ್ಯಾಭ್ಯಾಸಕ್ಕೆ ಪೂರಕವಾದ ವಾತಾವರಣದ ಮೇಲೆ.ಅವರಿಟ್ಟ ನಂಬಿಕೆ ಹುಸಿಯಾಗಲಿಲ್ಲ. ಹಿರಿಯ ಮಗ ಮುತ್ತುರಾಜ್ ಅಜ್ಜಪ್ಪ ಮನ್ನಿಕೇರಿ ಜವಹರಲಾಲ್ ಮೆಡಿಕಲ್ ಕಾಲೇಜು,ಬೆಳಗಾವಿಯಲ್ಲಿ, ಮಗಳು ಸಪ್ನ ಅಜ್ಜಪ್ಪ ಮನ್ನಿಕೇರಿ, ಬೆಳಗಾವಿ ಇನ್ಸ್ಟಿಟ್ಯೂಟ್ಆಫ್ ಮೆಡಿಕಲ್ ಸೈನ್ಸ್,ಬೆಳಗಾವಿಯಲ್ಲಿ,ಕಾರ್ತಿಕ್ ಅಜ್ಜಪ್ಪ ಮನ್ನಿಕೇರಿ, ಕೆ.ವಿ.ಜಿ.ಮೆಡಿಕಲ್ಕಾಲೇಜು ಸುಳ್ಯ ಹಾಗೂ ಲಿಖಿತ್ ಅಜ್ಜಪ್ಪ ಮನ್ನಿಕೇರಿ,ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್,ಹುಬ್ಬಳ್ಳಿಯಲ್ಲಿ ಎಂ.ಬಿ.ಬಿ.ಎಸ್ ಅಧ್ಯಯನ ನಡೆಸುತ್ತಿದ್ದು,ಹೆತ್ತವರಾಗಿ ಮನ್ನಿಕೇರಿ ದಂಪತಿಗಳು ಅದೆಷ್ಟು ಸಂಭ್ರಮಿಸಿದರೋ ಜ್ಞಾನಸುಧಾ ಬಳಗವೂ ಅಷ್ಟೇ ಸಾರ್ಥಕ್ಯವನ್ನು ಅನುಭವಿಸಿದುದು ಸುಳ್ಳಲ್ಲ.ತನ್ನೂರಿನ ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಶಿಕ್ಷಣದ ಬಗ್ಗೆ ಅತೀವ ಕಾಳಜಿಯುಳ್ಳ ಅಜ್ಜಪ್ಪ ಮನ್ನಿಕೇರಿಯವರ ಮಕ್ಕಳು ಶ್ರೇಷ್ಠ ವೈದ್ಯರಾಗಿ, ಜನಾನುರಾಗಿಯಾಗಿ ಪ್ರವರ್ಧಮಾನಕ್ಕೆ ಬರಲಿ, ಈ ನಾಲ್ವರ ಸಾಧನೆ ಅನೇಕ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ ಎನ್ನುವುದು ಜ್ಞಾನಸುಧಾ ಕುಟುಂಬದ ಆಶಯ.



ಮುತ್ತುರಾಜ್ ಅಜ್ಜಪ್ಪ



ಸಪ್ನ ಅಜ್ಜಪ್ಪ



ಕಾರ್ತಿಕ್ ಅಜ್ಜಪ್ಪ



ಲಿಖಿತ್ ಅಜ್ಜಪ್ಪ

## ರಾಜ್ಯ ಮಟ್ಟದ ರಿಪಬ್ಲಿಕ್ ಡೇ ಪೆರೇಡ್‌ಗೆ ಕು.ವೃದ್ಧಿ ಶೆಟ್ಟಿ

ಜ್ಞಾನಸುಧಾ ಪಿ.ಯು.ಕಾಲೇಜಿನ ದ್ವಿತೀಯ ಪಿ.ಯು.ಸಿ.ಯ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿನಿ ಕು.ವೃದ್ಧಿ ಶೆಟ್ಟಿಯವರು ರಾಜ್ಯ ಮಟ್ಟದ ರಿಪಬ್ಲಿಕ್ ಡೇ ಪೆರೇಡ್‌ನಲ್ಲಿ ಭಾಗವಹಿಸಲು ಆಯ್ಕೆಯಾಗಿರುತ್ತಾರೆ. ಇವರನ್ನು ಅಧ್ಯಕ್ಷರು, ಪ್ರಾಂಶುಪಾಲರು ಹಾಗೂ ಜ್ಞಾನಸುಧಾ ಬಳಗ ಅಭಿನಂದಿಸುತ್ತದೆ.



## ಶ್ರೀ ಪಿ. ವಸಂತ ಆಚಾರ್ ಅವರಿಗೆ ಸನ್ಮಾನ

ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜು ಗಣಿತ ನಗರ ಇಲ್ಲಿ ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಉಡುಪಿ ಜಿಲ್ಲಾ ರಸಾಯನ ಶಾಸ್ತ್ರ ಉಪನ್ಯಾಸಕರ ವೇದಿಕೆಯ ಅಧ್ಯಕ್ಷ ಹಾಗೂ ಸರಕಾರಿ ಪದವಿ ಪೂರ್ವ ಕಾಲೇಜು ಪಳ್ಳಿಯ ಪ್ರಾಂಶುಪಾಲ ಶ್ರೀ ಪಿ. ವಸಂತ ಆಚಾರ್ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭ ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ನ ಅಧ್ಯಕ್ಷ ಡಾ.ಸುಧಾಕರ ಶೆಟ್ಟಿ, ಎಪಿಜಿಇಟಿಯ ಟ್ರಸ್ಟಿಗಳಾದ ಶ್ರೀ ಕರುಣಾಕರ ಶೆಟ್ಟಿ, ಶ್ರೀಮತಿ ವಿದ್ಯಾ ಸುಧಾಕರ ಶೆಟ್ಟಿ, ಆಡಳಿತ ಮಂಡಳಿ ಸದಸ್ಯ ಡಾ. ಪ್ರಕಾಶ್ ಶೆಣೈ, ಶ್ರೀ ಅನಿಲ್ ಕುಮಾರ್ ಜೈನ್, ಸಂಸ್ಥೆಯ ಹಿತೈಷಿಗಳಾದ ಶ್ರೀ ತ್ರಿವಿಕ್ರಮ ಕಿಣಿ, ಶ್ರೀ ದೇವೇಂದ್ರ ನಾಯಕ್, ಶ್ರೀ ಸುಕುಮಾರ ಶೆಟ್ಟಿ, ಉಭಯ ಸಂಸ್ಥೆಗಳ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ ಕೊಡವೂರ್, ಶ್ರೀಮತಿ ಉಷಾ ರಾವ್ ಯು, ವೈಸ್ ಪ್ರಿನ್ಸಿಪಾಲರುಗಳಾದ ಶ್ರೀ ಸಾಹಿತ್ಯ ಹಾಗೂ ಶ್ರೀಮತಿ ವಾಣಿ ಜಯಶೀಲ್, ಪಿ.ಆರ್.ಓ ಶ್ರೀಮತಿ ಜ್ಯೋತಿ ಪದ್ಮನಾಭ ಭಂಡಿ, ರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಮಿಥುನ್ ಯು ಉಪಸ್ಥಿತರಿದ್ದರು.



# ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರ ದಿನಾಚರಣೆ ಸಂಭ್ರಮ ;
# ಸಾಧಕರಿಗೆ ಸನ್ಮಾನ ಹಾಗೂ ಹದಿನೆಂಟು ಲಕ್ಷದ ಮೂವತ್ತು ಸಾವಿರ ರೂಪಾಯಿ ವಿದ್ಯಾರ್ಥಿ ವೇತನ ವಿತರಣೆ
# ರಾಷ್ಟ್ರದ ರಕ್ಷಣಾ ನಿಧಿಗೆ ತೊಂಬತ್ತಾರು ಸಾವಿರ ರೂಪಾಯಿ

## ‘ಜ್ಞಾನಸುಧಾ ಶಿಕ್ಷಣ ಸಂಸ್ಥೆಯಿಂದ ಅಪಾರ ಸಾಧನೆ’

**ಎಂ. ಕೆ. ವಿಜಯ್ ಕುಮಾರ್**

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಖ್ಯಾತ ಹಿರಿಯ ನ್ಯಾಯವಾದಿ




ನನಗೆ ಹೆಮ್ಮೆ ಅನಿಸುತ್ತಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಸಾಧನೆಯನ್ನು ಮಾಡುತ್ತಿರುವ ಜ್ಞಾನಸುಧಾ ಶಿಕ್ಷಣ ಸಂಸ್ಥೆಯು ನಾಡಿಗೆ ನೀಡುತ್ತಿರುವ ಸಂದೇಶ ಅಪೂರ್ವವಾದುದು. ದೇಶ ಒಳ್ಳೆಯದಾದರೆ ನಾವು ಒಳ್ಳೆಯವರಾಗುತ್ತೇವೆ. ಸಂಸ್ಥೆ ಬೆಳೆದದ್ದು ಯಾರಿಂದ? ಯಾರಿಗೆ? ಎಂಬ ಸ್ಪಷ್ಟ ಕಲ್ಪನೆಯನ್ನು ನೀಡುವ ಮಾದರಿ ಕಾರ್ಯಕ್ರಮ ಇದಾಗಿದೆ. ಇದಕ್ಕೆ ಕಾರಣೀಕರ್ತರಾದ ಸಂಸ್ಥೆಯ ಅಧ್ಯಕ್ಷ ಡಾ.ಸುಧಾಕರ ಶೆಟ್ಟಿಯವರ ನೇತೃತ್ವದ ಬಳಗವು ಗೌರವಕ್ಕೆ ಪಾತ್ರವಾಗಿದೆ.

ಇದೊಂದು ಅತ್ಯಂತ ಮಾದರಿ ಕಾರ್ಯಕ್ರಮವಾಗಿದೆ. ನನ್ನ ಜೀವನದಲ್ಲಿ ಇಂತಹ ಪುಣ್ಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟದಕ್ಕೆ ನಾನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿಯವರಿಗೆ ಕೃತಜ್ಞನಾಗಿದ್ದೇನೆ. ಎಲ್ಲರನ್ನು ಸೇರಿಸಿಕೊಂಡು ಎಲ್ಲರಿಗೂ ಗೌರವವನ್ನು ಕೊಟ್ಟು, ಸಾಧನೆಯನ್ನು ಮಾಡಿದಂತಹ ಎಲ್ಲಾ ಸಾಧಕರನ್ನು ಗೌರವಿಸುತ್ತಾ, ಅವರ ಬೆನ್ನು ತಟ್ಟಿ ಮುಂದೆ ಹೋಗಿ ಇನ್ನಷ್ಟು ಗೆಲುವು ನಿಮ್ಮದಾಗಲಿ ಜೀವನದ ಹಾದಿ ಯಶಸ್ವಿಯಾಗಲಿ ಎಂಬ ಆಶಯದ ಕಾರ್ಯಕ್ರಮ ಇದು. ಇಂತಹ ವೇದಿಕೆಯಲ್ಲಿ ಮಾದರಿಯಾಗಿ ಸಮಾಜದಲ್ಲಿ ನಿಲ್ಲುವಂತವರನ್ನು ಕರೆದು ಅತಿಥಿಗಳನ್ನಾಗಿ ಗೌರವಿಸಿ ಮಾಡಿದಂತಹ ಕಾರ್ಯ ಶ್ಲಾಘನೀಯ. ದೇಶಕ್ಕೆ ನಮ್ಮ ಕೊಡುಗೆ ಏನು? ದೇಶ ಉಳಿದರೆ ನಾವು ಉಳಿಯುತ್ತೇವೆ. ದೇಶ ಒಳ್ಳೆಯದಾದರೆ ನಾವು ಒಳ್ಳೆಯವರಾಗುತ್ತೇವೆ ಎಂಬ ಸಂದೇಶವನ್ನು ನೀಡುತ್ತಿರುವುದಕ್ಕೆ 96,000 ರೂಪಾಯಿಗಳನ್ನು ರಕ್ಷಣಾ ನಿಧಿಗೆ ನೀಡಿದ ಕೊಡುಗೆ ಸಾಂಕೇತಿಕವಾಗಿದೆ ಎಂದು ಪ್ರಶಂಸಿಸಿದರು.

### ಸನ್ಮಾನದ ಕುರಿತು,

ನನಗೆ ತಿಳಿದವರೆಲ್ಲರೂ ನೀಡುತ್ತಿರುವ ಪ್ರೀತಿ, ಗೌರವ ವಿಶ್ವಾಸ ಎಲ್ಲಾ ಸನ್ಮಾನಕ್ಕಿಂತಲೂ ದೊಡ್ಡದು ಎಂದು ಭಾವಿಸಿದ್ದೇನೆ.

### ಗೋಪ ಶೆಟ್ಟರು ಸರಳ ಜೀವಿ, ಕಾಯಕ ಯೋಗಿ :

ಗೋಪ ಶೆಟ್ಟರನ್ನು ನಾನು ಬಹಳ ಹತ್ತಿರದಿಂದಲೆ ಕಂಡವನು. ಅವರ ಜೊತೆ ದಶಕಗಳ ಕಾಲ ಸಂಪರ್ಕದಲ್ಲಿದ್ದವನು. ನನಗೆ ಗೊತ್ತಿದೆ. ಅವರು ಅತ್ಯಂತ ಸರಳ ಜೀವಿ, ಶ್ರಮಜೀವಿ. ಕಾಯಕ ಯೋಗಿ. ಅವರು ಕುಟುಂಬದವರಿಗೂ, ಊರಿಗೂ, ಎಲ್ಲರಿಗೂ ಅನ್ನದಾತರು ಆದ ಕೃಷಿಯೋಗಿ. ನಾನು ಹೆಮ್ಮೆಯಿಂದ ಹೇಳುತ್ತೇನೆ. ಈಗಲೂ ನೆನಪಿದೆ. ಅವರು ಒಂದು ಬಾರಿ ನನ್ನನ್ನು ಗುಡ್ಡದ ಜಾಗದಲ್ಲಿರುವ ತೆಂಗಿನ ತೋಟಕ್ಕೆ ಕರೆದುಕೊಂಡು ಹೋಗಿದ್ದರು. ಆ ಬೇಸಿಗೆ ಕಾಲದಲ್ಲಿ ಆ ತೆಂಗಿನ ಮರಗಳು ಬಾಡದೆ ಜೀವ ಚೈತನ್ಯದಿಂದ ಕೂಡಿ ಕಲ್ಪವೃಕ್ಷವಾಗಿದ್ದವು. ತೆಂಗಿನ ಮರ ಹೇಗೆ ಬೆಳೆಸ ಬೇಕು. ಹೇಗೆ ಸಾಕ ಬೇಕು ಎಂದೆಲ್ಲ ಹೇಳಿಕೊಟ್ಟಿದ್ದರು. ನಾನು ಕೂಡಾ ಒಬ್ಬ ಕೃಷಿಕ. 15000 ಅಡಿಕೆ ಸಸಿ. 8 ಸಾವಿರ ರಬ್ಬರ್ ಗಿಡ ನೆಟ್ಟಿದ್ದೇನೆ. ನಾನು ಏನು ಸಂಪಾದನೆ ಮಾಡಿದ್ದೇನೆ ಅದನ್ನು ಕೃಷಿಗೆ, ಮಣ್ಣಿಗೆ ಹಾಕಿದ್ದೇನೆ. ಆ ವಿಷಯ ಅವರಿಗೂ ಗೊತ್ತಿತ್ತು. ಇನ್ನು ಸ್ವಲ್ಪ ಕಲಿಯಿರಿ ಅಂತ ಅವರ ಗುಡ್ಡೆಗೆ ಕರೆದುಕೊಂಡು ಹೋಗಿ ತೆಂಗಿನ ಮರದ ಬುಡವನ್ನು ತೋರಿಸಿದರು. ಎಷ್ಟು ಕಷ್ಟ ಪಟ್ಟು ಆ ವಯಸ್ಸಿನಲ್ಲಿ ದುಡಿಯುತ್ತಿದ್ದರು. ಆಗ ಅವರಿಗೆ 70ವರ್ಷ. ಆ ತೆಂಗಿನ ಮರದ ಬುಡಕ್ಕೆ ತೆಂಗಿನ ಕಾಯಿಯ ಸಿಪ್ಪೆ ಹಾಕಿ ನೀರನ್ನು ಇಂಗಿಸುವಂತೆ ಮಾಡಿದ್ದರು. ಭುವಿ ಭಾನು ಉರಿಯುತ್ತಿರುವ ಆ ಬೇಸಿಗೆ ಸಮಯದಲ್ಲೂ ಆ ಗಿಡದ ಬುಡದಲ್ಲಿ ಎಂಟ್ಹತ್ತು ದಿನಗಳ ಕಾಲ ನೀರಿನ ಪಸೆ ಕಾಯುತ್ತಿತ್ತು. ಅದನ್ನು ನಾನು ಅವರಿಂದ ಕಲಿತುಕೊಂಡು ಬಂದಿದ್ದೆ. ಗೋಪ ಶೆಟ್ಟಿಯವರು ಎಲ್ಲರಿಗೂ ಕೂಡಾ ಒಳ್ಳೆಯದನ್ನೆ ಬಯಸುವ ವ್ಯಕ್ತಿ. ಇಂದು ಅವರ ಮಗ ಸುಧಾಕರ್ ತಂದೆಯಂತೆಯೆ ಮಗ. ಒಬ್ಬ ಮಗ ಹೇಗಿದ್ದಾನೆ, ಹೇಗಿರಬೇಕು ಅನ್ನೋದಕ್ಕೆ ಅವರ ಆತ್ಮೀಯರಾದ ನಮಗೆ ಅಮೃತ ಕುಡಿದಷ್ಟೇ ಸಂತೋಷವಾಗುತ್ತಿದೆ.

### ‘ಮಾತು’ ಮಿತವಾಗಿರಬೇಕು,

ನನ್ನ ತಾಯಿಯಲ್ಲಿ ಗಂಡನ ಹೆಸರೇನು ಅಂತ ಕೇಳಿದ್ರೆ ನಾಲಿಗೆಯ ತುದಿಯಲ್ಲಿ ಹೇಳಬೇಕು ಎಂದು ಕುಣಿಯುತ್ತಿತ್ತು. ಆದರೆ ಒಳಗೆ ಗೌರವ ಭಾವ ಇತ್ತು. ನನ್ನ ಹೆಂಡತಿಯ ಕಾಲದಲ್ಲಿ ಗಂಡನ ಹೆಸರೇನು ಅಂತ ಕೇಳಿದ್ರೆ ಹೇಳ್ಬೆಕು, ಹೇಳ್ಬೇಕು ಅಂತ ಹೇಳಲು ತವಕಪಡುತ್ತಿದ್ದಳು. ಆದರೂ ಒಂದು ಗೌರವದ ಸಂಪ್ರದಾಯ. ಈಗ ನನ್ನ ಮಗನ ಸೊಸೆ ಬಂದ್ಲು. ಅವಳ ಹತ್ತಿರ ಗಂಡನ ಹೆಸರೇನು ಅಂತ ಕೇಳುವ ಅಗತ್ಯ ಇಲ್ಲ. ಕಾರಣ ಅವಳು ತನ್ನ ಗಂಡನನ್ನು ಹೆಸರಿನಿಂದಲೇ ಕರೆಯುವವಳು. ಈ ಮಾತು ಯಾಕಾಡಿದೆನೆಂದರೆ, ಈ ಹೊತ್ತು ನಿಮ್ಮ ಮಾತು ಸಾಕು ಎಂಬ ಧ್ವನಿ ಬರುವ ಸಾಧ್ಯತೆ ಇದೆ. ಮಧ್ಯಾಹ್ನದ ಸಮಯ. ಹೊತ್ತಾಗುತ್ತಿದೆ. ಆದರೂ ತಾವೆಲ್ಲ ನಮ್ಮ ಅಮ್ಮನ ಕಾಲದಲ್ಲಿದ್ದೀರಿ. ಇನ್ನು ಸ್ವಲ್ಪ ಹೊತ್ತು ಮಾತನಾಡಿದ್ರು ಕೂಡಾ ಸೊಸೆಯ ಕಾಲ ಬಂದೀತು.

### ನಾನು ಯಾವತ್ತು ಆಶಾವಾದಿ

ಒಂದು ಕಾಲ ಇತ್ತು. ನೀವೂ ಲೋಕಪಾಲ ತಿಲಕರಾಗಿ, ಲಾಲಲಜಪತರಾಯ್ ಆಗಿ, ವಲ್ಲಭಬಾಯ್ ಪಟೇಲರಾಗಿ, ಚಕ್ರವರ್ತಿ ರಾಜಗೋಪಾಲಾಚಾರಿಯಾಗಿ ಅಂತ ಹೇಳುತ್ತಿದ್ದರು. ಈಗ ಕಾಲ ಬಂದಿದೆ. ಅವರ ಹಾಗೆ ಆಗ ಬೇಡಿ. ಮತ್ತೊಬ್ಬರ ಹಾಗೇ ಆಗ ಬೇಡಿ, ಇವರ ಹಾಗೆ ಆಗ ಬೇಡಿ. ನಮ್ಮ ನಾಯಕರ ಹಾಗೆ ಆಗಬೇಡಿ. ಆದರೆ ಈ ಸಂಸ್ಥೆಯ ಒಳಗೆ ಬಂದಾಗ ನನ್ನ ಭಾವನೆಗೆ ಬಂತು. ಸಂಸ್ಥೆಯ ಪ್ರತಿಯೊಬ್ಬ ವಿದ್ಯಾರ್ಥಿ, ಈ ಸಂಸ್ಥೆಯಲ್ಲಿ ದುಡಿಯುವ ಉದ್ಯೋಗಿಗಳು, ಎಲ್ಲರದ್ದೂ ಅತೀ ದೊಡ್ಡ ಸಾಧನೆ. ನನ್ನ ಹಾಗೇ ಆಗಿ ಎಂದು ನೂರು ಜನರಿಗೆ ಸಾರುವಂತಹ ಶಕ್ತಿಯನ್ನು ನೀಡಿ ಸಮಾಜದ ಆದರ್ಶ ವ್ಯಕ್ತಿಗಳಾಗಿದ್ದೀರಿ ಎನ್ನುವ ಸಂದೇಶ ತಾವು ನೀಡುತ್ತಿದ್ದಿರಿ. ಭಾರತದ ಭವಿಷ್ಯದ ಬಗ್ಗೆ ನಾನು ಯಾವಾಗಲೂ ಆಶಾವಾದಿ. ನನಗೆ ಮುಂದಿನ ಜನಾಂಗದ ಬಗ್ಗೆ ಅತ್ಯಂತ ಪ್ರೀತಿ, ವಿಶ್ವಾಸ, ಭರವಸೆ, ಧೈರ್ಯ ಇದೆ. ಧೈರ್ಯಂ ಸರ್ವತ್ರ ಸಾಧನಂ. ಏನೇ ಆಗಲಿ. ಧೈರ್ಯದಿಂದ ಸಮಾಜದಲ್ಲಿ ಮುನ್ನುಗ್ಗಿ.

### ತಂದೆಯ ನೆನೆದು ಭಾವುಕರಾದ ಎಂ.ಕೆ ವಿಜಯ್ ಕುಮಾರ್

ಭುವನೇಂದ್ರ ಕಾಲೇಜಿನ ಮೊದಲ ಬ್ಯಾಚಿನ ವಿದ್ಯಾರ್ಥಿ ನಾನು. ನನ್ನ ಇಡೀ ಭವಿಷ್ಯವನ್ನು ಅಂದಿನ ಪ್ರಾಂಶುಪಾಲ ಕೆ.ದಾಮೋದರ ಕಿಣಿಯವರು ಬದಲಾಯಿಸಿದರು. ನಾನು ಅಡ್ಡ ದಾರಿ ಹಿಡಿದಿದ್ದೆ. ನನ್ನ ತಂದೆ ರಾಷ್ಟ್ರ ಪ್ರಶಸ್ತಿ ಪಡೆದವರು. ನನಗೆ ಇಂದು ನಾಡಿನ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ. ನಾನು ವಿದ್ಯಾರ್ಥಿಯಾಗಿದ್ದಾಗ ಎಷ್ಟೋ ಸಲ ಪರೀಕ್ಷೆಗೋಸ್ಕರ ತಡರಾತ್ರಿವರೆಗೂ ಓದುತ್ತಿದ್ದೆ. ಬೆಳಗ್ಗೆ ಬೇಗ ಏಳುತ್ತಿದ್ದೆ. ನಾನು ಬೆಳಗ್ಗೆ 5ಗಂಟೆಗೆ ಎದ್ದರೆ ನನ್ನ ತಂದೆ 4ಗಂಟೆಗೆ ಏಳುತ್ತಿದ್ದರು. ನಾನು ಇನ್ನು ತಡವಾಗಿ ಮಲಗಿದರೆ ನನ್ನ ತಂದೆ ಇನ್ನು ತಡವಾಗಿ ಬರೆಯುತ್ತಿದ್ದರು. ಮೂಡಬಿದಿರೆಯ ಜೈನ ಕಾಶಿಯಲ್ಲಿ ಕ್ರಿಸ್ತ ಪೂರ್ವದಲ್ಲಿ ತಾಳೆಗರಿಯಲ್ಲಿದ್ದ ಸಂಸ್ಕೃತದ ಮಹಾ ಕೃತಿಯನ್ನು ಭಾಷಾಂತರಿಸುತ್ತಿದ್ದರು. ಅಂದು ಅವರ ಕಾರ್ಯವನ್ನು ರಾಷ್ಟ್ರವೇ ಗುರುತಿಸಿ ಪ್ರಶಸ್ತಿ ನೀಡಿತ್ತು. ನಾನು ಯಾಕೆ ಈ ಮಾತು ಹೇಳುತ್ತಿದ್ದೇನೆಂದರೆ ಇವತ್ತು ಅವರ ಬಗ್ಗೆ ಯೋಚಿಸುವಾಗ, ನಮ್ಮ ಗೋಪಶೆಟ್ಟಿಯವರ ಬದುಕನ್ನು ಯೋಚಿಸುವಾಗ ಭಾವುಕರಾಗುತ್ತೇವೆ. ಗದ್ಗದಿತರಾಗುತ್ತೇವೆ. ಎಂತಹ ಶ್ರಮ ಜೀವಿಗಳಾಗಿದ್ರು ಏನು ಕನಸು ಪಟ್ರು. ಈ ಮಕ್ಕಳು ಏನು ಆಗ ಬೇಕು ಎಂದು ಭಾವಿಸಿದವರು. ಅಂತಹ ಕನಸನ್ನು ಸುಧಾಕರ್ ಶೆಟ್ಟರು ನನಸು ಮಾಡಿದ್ದಾರೆ.

### ವಿದ್ಯಾರ್ಥಿಗಳಿಗೆ ಕರೆ,

ನಾನು ಎಲ್ಲಾ ವಿದ್ಯಾರ್ಥಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹೇಗೆ ಸುಧಾಕರ ಶೆಟ್ಟರು ತಮ್ಮ ತಂದೆ ತಾಯಿಗಳನ್ನು ಸಾಕಾರಮೂರ್ತಿಯಾಗಿಸಿದರೋ ಅದೇ ರೀತಿ ನಿಮ್ಮ ತಂದೆ ತಾಯಿಯನ್ನು ಗೌರವಿಸುವವರು ನೀವಾಗ ಬೇಕು. ಯಾರೇ ಕೆಟ್ಟದಾಗಿರ ಬಹುದು ಆದರೆ ತಾಯಿ ಯಾವತ್ತು ಕೆಟ್ಟವಳಾಗಲಾರಳು. ಹಾಗೆಯೇ ನಮ್ಮ ಹೆತ್ತವರು ಎಂದೆಂದಿಗೂ ನಮ್ಮ ಏಳಿಗೆಗೋಸ್ಕರ ಒಳಿತನ್ನು, ಶುಭವನ್ನು ಕೋರುವವರು. ಹಾಗೆ ತಾವೆಲ್ಲ ಆಗ ಬೇಕು.

ನನಗೆ ಬಹಳ ಹೆಮ್ಮೆ ಆಗುತ್ತಿದೆ. ನೀವೆಲ್ಲ ಸಾಧನೆ ಮಾಡಿದವರು. ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿದಂತಹ ನಿಮ್ಮನ್ನು ಗೌರವಿಸುವಂತಹ ಈ ಕಾರ್ಯಕ್ರಮ ಇಡೀ ಕರ್ನಾಟಕ ನೋಡಬೇಕು. ಎಂತಹ ವಿದ್ಯಾರ್ಥಿಗಳನ್ನು ರೂಪಿಸಿದೆ ಎಂಬುದನ್ನು ಕರ್ನಾಟಕ ಗಮನಿಸ ಬೇಕು. ಅಂತಹ ಒಂದು ಕಾರ್ಯಕ್ರಮ ಇದು. ಅದಕ್ಕಾಗಿ ನಾನು ಬಹಳ ಸಂತೋಷ ಪಡುತ್ತೇನೆ.

## ವೈದ್ಯಕೀಯ ಕ್ಷೇತ್ರಕ್ಕೆ ಪ್ರತಿಭಾನ್ವಿತರ ಕೊಡುಗೆ ನೀಡುತ್ತಿರುವ ಜ್ಞಾನಸುಧಾ

**ಶ್ರೀ ಅಜ್ಜಪ್ಪ ಮನ್ನಿಕೇರಿ**

ಕ್ಷೇತ್ರಶಿಕ್ಷಣಾಧಿಕಾರಿ ಮೂಡಲಗಿ




ಶಿಕ್ಷಕ ಹಾಗೂ ವೈದ್ಯರು ಬದುಕಿನ ಜೊತೆ ಕೆಲಸ ಮಾಡುವವರು. ಟೀಚರ್ ಜೀವನದ ಜೊತೆ ಕೆಲಸ ಮಾಡುತ್ತಾರೆ. ಡಾಕ್ಟರ್ ಜೀವದ ಜೊತೆ ಕೆಲಸ ಮಾಡುತ್ತಾರೆ. ಇವೆರಡು ಕೆಲಸಗಳು ಅತ್ಯಂತ ಶ್ರದ್ಧಾಪೂರ್ವಕವಾದದ್ದು. ಶಿಕ್ಷಕರು ಹಾಗೂ ವೈದ್ಯರು ಪ್ರತಿಯೊಬ್ಬರ ಬದುಕಿನಲ್ಲಿ ಮಹತ್ವದ ಪಾತ್ರವಹಿಸುತ್ತಾರೆ. ಶಿಕ್ಷಕರು ಜೀವನವನ್ನು ರೂಪಿಸುವವರಾದರೆ ವೈದ್ಯರು ಜೀವ ಕಾಪಾಡುವವರು. ಹೀಗಾಗಿ ಇವೆರಡು ವೃತ್ತಿಯನ್ನು ಶ್ರದ್ಧೆಯಿಂದ ನಿರ್ವಹಿಸಿ ಸಾರ್ಥಕತೆ ನೀಡುವುದು ಇಬ್ಬರದ್ದೂ ಜವಾಬ್ದಾರಿ. ಜ್ಞಾನಸುಧಾ ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದಿದೆ.

ನಾನು ಜ್ಞಾನಸುಧಾ ಸಂಸ್ಥೆಗೆ ಚಿರಋಣಿ. ನನ್ನ ನಾಲ್ಕು ಮಕ್ಕಳು ಇಲ್ಲಿ ಓದಿ ಎಂ.ಬಿ.ಬಿ.ಎಸ್ ಶಿಕ್ಷಣ ಪಡೆಯುವಂತೆ ಮಾಡಿದ ಪ್ರೇರಕ ಸಂಸ್ಥೆ. ಯಾವ ಉದ್ದೇಶ ಇಟ್ಟುಕೊಂಡು ಸಂಸ್ಥೆಗೆ ನಮ್ಮ ಮಕ್ಕಳು ಸೇರಿದರೋ ಅದನ್ನು ಈಡೇರಿಸಿಕೊಂಡರು. ತಂದೆ ತಾಯಿಯಾದ ನಾವು ಜ್ಞಾನಸುಧಾದ ಮೇಲೆ ಇಟ್ಟ ನಂಬಿಕೆಯನ್ನು ಹುಸಿಮಾಡದಂತೆ ನಮ್ಮ ಮನದಲ್ಲಿ ಬಹು ಎತ್ತರದಲ್ಲಿ ನಿಲ್ಲುವಂತೆ ತೋರಿಸಿಕೊಟ್ಟ ಸಂಸ್ಥೆಗೆ ನಾನು ಚಿರ ಋಣಿಯಾಗಿದ್ದೇನೆ.

## ಹಣಗಳಿಕೆಗಿಂತ ಮೌಲ್ಯಯುತ ಬದುಕು ಮುಖ್ಯ

ಡಾ.ಜಯಪ್ರಕಾಶ. ಕೆ
ಎ.ಜೆ ಇನ್ಸ್ಟಿಟ್ಯೂಟ್‌ನ ಮೆಡಿಕಲ್ ಸೈನ್ಸ್ ರಿಸರ್ಚ್ ಸೆಂಟರ್‌ನ ಮೆಡಿಕಲ್ ಸುಪರಿಂಟೆಂಡೆಂಟ್ ಅಂಡ್ ಪ್ರೊಫೆಸರ್ ಆಫ್ ಫಾರೆನ್ಸಿಕ್ ಮೆಡಿಸಿನ್




ಎಂ.ಬಿ.ಬಿ.ಎಸ್ ಮೊದಲಿನಷ್ಟು ಸುಲಭ ಇಲ್ಲ. ಡೇ ವನ್ ಇಂದಲೇ ಓದಿನತ್ತ ಗಮನ ಇರಬೇಕು. ಹಾಗೇ ಓದಿದರೆ ಮಾತ್ರ ನೀವಲ್ಲಿ ಮೇಲೆ ಬೀಳುತ್ತೀರಿ. ದುರಾಭ್ಯಾಸಗಳಿಗೆ ಒಳಗಾಗಬೇಡಿ. ಜೀವನದಲ್ಲಿ ಅಪ್ಪ ಅಮ್ಮನಿಗೆ ಏನು ಕೊಡಲು ಸಾಧ್ಯ ಎಂಬುದನ್ನು ಮನದಲ್ಲಿ ಅಂದುಕೊಳ್ಳಿ, ಅದು ನಿಮ್ಮ ಉತ್ತಮವಾದ ಓದಿನಿಂದ. ಉತ್ತಮವಾದ ನಡವಳಿಕೆಯಿಂದ, ಉತ್ತಮವಾದಂತಹ ಜೀವನ ಶೈಲಿಯಿಂದ ಮಾತ್ರ ಸಾಧ್ಯ. ಓದುವಾಗ ಮಿನಿಮಂ ಟಾರ್ಗೆಟ್ ಇಟ್ಟುಕೊಳ್ಳಬೇಕು. ಶೇಕಡಾ ಎಪ್ಪತ್ತೈದು ಪರ್ಸೆಂಟ್ ತೆಗೆಯುವತ್ತ ಅತ್ಯಂತ ಕಠಿಣ ಪರಿಶ್ರಮವನ್ನು ಹಾಕಬೇಕು. ಕಲಿಕೆಯ ಸಂದರ್ಭ ಅತ್ಯಂತ ಜಾಗ್ರತೆಯಿಂದ ಓದಿನತ್ತ ಚಿತ್ತ ಹರಿಸಿದರೆ ಮುಂದಿನ ಜೀವನದ ಬುತ್ತಿ ನಿಮ್ಮನ್ನು ಸಾಕುವುದರಲ್ಲಿ ಸಂಶಯವಿಲ್ಲ. ಇಂದಿನ ನಿಮ್ಮ ಓದೇ ಮುಂದಿನ ಜೀವನವನ್ನು ಸದಾ ಕಾಯಲಿದೆ ಎಂಬುದನ್ನು ವಿದ್ಯಾರ್ಥಿಗಳಾದವರು ನೆನಪಿಟ್ಟುಕೊಳ್ಳಬೇಕು. ಹಾಗೆಂದು ಜೀವನದಲ್ಲಿ ಹಣ ಮುಖ್ಯವಲ್ಲ. ಅದಕ್ಕಿಂತ ಮಿಗಿಲಾದುದು ಮೌಲ್ಯಯುತವಾದ ಬದುಕು ಎಂಬುದನ್ನು ಮರೆಯಬಾರದು.

## ಜ್ಞಾನಸುಧಾ ಶಿಕ್ಷಣ ಸಂಸ್ಥೆಯಿಂದ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಉಡುಪಿಯಲ್ಲಿ ಪಿಯು ಕಾಲೇಜು

ಡಾ.ಸುಧಾಕರ ಶೆಟ್ಟಿ
ಅಧ್ಯಕ್ಷರು, ಅಜೆಕಾರು ಪದ್ಮಗೋಪಾಲ ಎಜ್ಯುಕೇಶನ್ ಟ್ರಸ್ಟ್.

ಈ ಎಂಟು ವರ್ಷಗಳಲ್ಲಿ 193ರಷ್ಟು ವಿದ್ಯಾರ್ಥಿಗಳು ಎಂ.ಬಿ.ಬಿ.ಎಸ್ ಪ್ರವೇಶ ಪಡೆದಿರುವುದು ತಮ್ಮ ತಂಡವನ್ನು ಯಾವತ್ತು ಪ್ರೇರೆಪಿಸುತ್ತದೆ. ಬಡ ಕೃಷಿ ಕುಟುಂಬದಿಂದ ಬಂದ ನನ್ನಲ್ಲಿ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎನ್ನುವ ಕನಸಿತ್ತು. ಅದು ಜ್ಞಾನಸುಧಾದ ಮೂಲಕ ಸಾಕಾರಗೊಳ್ಳುತ್ತಿದೆ. ಯಾವುದೇ ಸಾಧನೆ ಎಂಬುದು ಮುಖ್ಯವಲ್ಲ. ನಡೆದು ಬಂದ ದಾರಿಯಲ್ಲಿನ ಸವಿನೆನಪುಗಳು ಶಾಶ್ವತವಾದುದು. ಸಾಧನೆ ಎಷ್ಟೇ ದೊಡ್ಡದಾಗಿದ್ದರು ಕೂಡಾ ತಂದೆ ತಾಯಿಗಳ ಸೇವೆಯು ಬಹುದೊಡ್ಡದು. ಇದೇ ಸಂದರ್ಭದಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಉಡುಪಿಯಲ್ಲಿ ಪಿ.ಯು ಕಾಲೇಜನ್ನು ಆರಂಭಿಸಲು ಸರಕಾರದ ಅನುಮತಿಯ ನಿರೀಕ್ಷೆಯಲ್ಲಿದ್ದೇವೆ.

ಅಜೆಕಾರು ಪದ್ಮಗೋಪಾಲ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ರೂಪಾಯಿ 96,000 ಮೊತ್ತವನ್ನು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಂ.ಕೆ.ವಿಜಯ್‌ಕುಮಾರ್‌ರವರ ಮೂಲಕ ರಾಷ್ಟ್ರದ ರಕ್ಷಣಾ ನಿಧಿಗೆ ಹಸ್ತಾಂತರಿಸಲಾಯಿತು.




ಜ್ಞಾನಸುಧಾ ಸಂಸ್ಥಾಪಕ ದಿನಾಚರಣೆ ಹಾಗೂ ರಾಷ್ಟ್ರೀಯ ಗಣಿತ ದಿನವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಗೋಪಾಲ ಶೆಟ್ಟರ ಭಾವಚಿತ್ರಕ್ಕೆ ಹಾಗೂ ಗಣಿತಜ್ಞ ಶ್ರೀನಿವಾಸ ರಾಮನುಜಂರವರ ಭಾವಚಿತ್ರಗಳಿಗೆ ಪುಷ್ಪವಂದನೆ ನೆರವೇರಿಸಲಾಯಿತು.




ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ನ್ಯಾಯವಾದಿ ಶ್ರೀ ಎಂ.ಕೆ ವಿಜಯ್ ಕುಮಾರ್‌ರವರನ್ನು ಹಾಗೂ ಸಾಮಾಜಿಕ ಸೇವೆಯಲ್ಲಿ ಗುರುತಿಸಿಕೊಂಡ ಮೈಮುನಾ ಫೌಂಡೇಶನ್ (ರಿ.) ಸಂಸ್ಥಾಪಕ ಆಪತ್ಭಾಂಧವ ಆಸೀಫ್‌ರವರನ್ನು ಸನ್ಮಾನಿಸಿ ಗೌರವಿಸಲಾಯಿತು.




## ಜ್ಞಾನಸುಧಾದಲ್ಲಿ NEET ಲಾಂಗ್‌ಟರ್ಮ್ ತರಗತಿಗಳು ಆರಂಭ

ವೈದ್ಯ ವೃತ್ತಿ ಶ್ರೇಷ್ಠವಾದ ವೃತ್ತಿ.ಪ್ರಾಣ ಉಳಿಸಿ, ಗಾಯ ವಾಸಿಯಾಗಿಸಿ, ನೋವು ನೀಗಿಸುವ ವೈದ್ಯರು ಸಮಾಜದ ಆಸ್ತಿ.ಜನಸಂಖ್ಯೆಗನುಗುಣವಾಗಿ ವೈದ್ಯರ ಸಂಖ್ಯೆ ಇರದಿರುವುದು ಕಳವಳಕಾರಿ ಸಂಗತಿ. ಈ ದಿಸೆಯಲ್ಲಿ ಗ್ರಾಮೀಣ ಭಾಗದಲ್ಲಿದ್ದುಕೊಂಡು ನೀಟ್ ಮೂಲಕ ವೈದ್ಯಕೀಯ ಕೋರ್ಸಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳನ್ನು ತರಬೇತುಗೊಳಿಸುತ್ತಿರುವ ಹೆಮ್ಮೆ ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಯದ್ದು. ಕಳೆದ ಹತ್ತು ವರ್ಷಗಳಿಂದ ಶೈಕ್ಷಣಿಕ ಹಾಗೂ ಎಲ್ಲಾ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡುತ್ತಿರುವ ಜ್ಞಾನಸುಧಾ, ಪ್ರಸ್ತುತ ವರ್ಷದಿಂದ ಎಂ.ಬಿ.ಬಿ.ಎಸ್ ಆಕಾಂಕ್ಷಿಗಳಿಗಾಗಿ ನೀಟ್ ಲಾಂಗ್‌ಟರ್ಮ್ ತರಗತಿಗಳನ್ನು ಪ್ರಾರಂಭಿಸಿದೆ. 'jnanasudha.com' ಸಹಭಾಗಿತ್ವದಲ್ಲಿ ಟೆಸ್ಟ್ ಸೀರೀಸ್ ಹಾಗೂ ನುರಿತ ಉಪನ್ಯಾಸಕರ ಮಾರ್ಗದರ್ಶನದಲ್ಲಿ ದ್ವಿತೀಯ ಪಿ.ಯು.ಸಿ ಮುಗಿಸಿದ ವಿದ್ಯಾರ್ಥಿಗಳಿಗೆ ಒಂದು ವರ್ಷದ ದೀರ್ಘಾವಧಿ ತರಬೇತಿಯನ್ನು ನೀಡಲಾಗುತ್ತಿದ್ದು,ಈ ಮೂಲಕ ವೈದ್ಯರಾಗಬೇಕೆಂಬ ವಿದ್ಯಾರ್ಥಿಗಳ ಕನಸನ್ನು ಪೋಷಿಸುವ ಮಹತ್ತರ ಹೆಜ್ಜೆಯನ್ನಿಡಲಾಗುತ್ತಿದೆ.

## ಜ್ಞಾನಸುಧಾದಲ್ಲಿ ಅಟಲ್ ಟಿಂಕರಿಂಗ್ ಲ್ಯಾಬ್‌ನ ಪ್ರಾರಂಭಕ್ಕೆ ಮುನ್ನುಡಿ

"ಅಟಲ್ ಇನ್ನೋವೇಶನ್ ಮಿಷನ್" ಭಾರತ ಸರಕಾರದ NITI ಆಯೋಗದ ಆಶ್ರಯದಲ್ಲಿ ಬರುವ ಒಂದು ಪ್ರಮುಖ ಯೋಜನೆ. ಭಾರತದಾದ್ಯಂತ ಹಲವಾರು ಸರಕಾರಿ, ಅನುದಾನಿತ ಹಾಗೂ ಅನುದಾನರಹಿತ ಸಂಸ್ಥೆಗಳು ಈ ಯೋಜನೆಯ ಫಲಾನುಭವಿಗಳು. ಅಂತೆಯೇ ಪ್ರಾರಂಭವಾದ ಕೇವಲ 8 ವರ್ಷಗಳಲ್ಲಿ ಯಶಸ್ವಿ ಕಂಡ ನಮ್ಮ ಸಂಸ್ಥೆಯಾದ ಕಾರ್ಕಳ ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆಯು ಭಾರತ ಸರಕಾರವು ಅನುದಾನ ನೀಡುವ ಈ ಲ್ಯಾಬನ್ನು ಪ್ರಾರಂಭಿಸುವ ಅವಕಾಶವನ್ನು ತನ್ನದಾಗಿಸಿಕೊಂಡಿದೆ.

"ಟಿಂಕರಿಂಗ್ ಲ್ಯಾಬ್ ಮಿಷನ್" ಈಗ ರಾಷ್ಟ್ರದಾದ್ಯಂತ ಸಾಮೂಹಿಕ ಚಳುವಳಿಯನ್ನು ಹುರಿದುಂಬಿಸುತ್ತಿದೆ. ಲಕ್ಷಾಂತರ ಪ್ರೌಢಶಾಲೆಯ ಯುವ ಸೃಜನಶೀಲ, ವಿಮರ್ಶಾತ್ಮಕ ಭಾವನೆಗಳಿರುವ ವಿದ್ಯಾರ್ಥಿಗಳನ್ನು ಗುರುತಿಸುವ ಶ್ರೇಷ್ಠ ಧ್ಯೇಯವನ್ನು ಹೊಂದಿದೆ. ಅದರ ಜೊತೆ ಆ ಅವಕಾಶ ನಮ್ಮ ಸಂಸ್ಥೆಗೂ ಸಿಕ್ಕಿರುವುದು ಸಂತೋಷದಾಯಕ ಅನುಭೂತಿ.

ಸಂಸ್ಥೆಯ ಪ್ರಾಂಶುಪಾಲೆ ಶ್ರೀಮತಿ ಉಷಾ ರಾವ್ ಯು ಅವರ ನೇತೃತ್ವದಲ್ಲಿ, ಭಾರತ ಸರಕಾರದ ಅನುದಾನದ ಅಡಿಯಲ್ಲಿ ಸುಮಾರು 1700 ಚದರ ಅಡಿ ವಿಸ್ತೀರ್ಣವುಳ್ಳ ಸುಸಜ್ಜಿತ ಟಿಂಕರಿಂಗ್ ಲ್ಯಾಬ್ ನಮ್ಮ ಸಂಸ್ಥೆಯ ಆವರಣದಲ್ಲಿ ಕೆಲವೇ ದಿನಗಳಲ್ಲಿ ಸ್ಥಾಪನೆಗೊಳ್ಳಲು ಎಲ್ಲಾ ಸಿದ್ಧತೆಗಳನ್ನು ನಡೆಸಿಕೊಳ್ಳುತ್ತಿದೆ.

## ರಾಷ್ಟ್ರ ರಕ್ಷಣಾ ನಿಧಿಗೆ ಜ್ಞಾನಸುಧಾದ ಕೊಡುಗೆ

ಭೂಮಿ ನನ್ನ ತಾಯಿ ಹಾಗೂ ನಾನು ಈ ಭೂಮಿ ತಾಯಿಯ ಮಗ. ಮನುಷ್ಯನಲ್ಲಿ ಯಾವಾಗ ಈ ಭಾವನೆ ಜನ್ಮತಾಳುತ್ತದೆಯೋ ಆಗ ಮಾತ್ರ ಒಬ್ಬ ನಿಜವಾದ ದೇಶಭಕ್ತನಾಗಲು ಸಾಧ್ಯ. ಸಮಾಜದ ಹಿತಕ್ಕಾಗಿ ಹಾಗೂ ದೇಶದ ಅಭಿವೃದ್ಧಿಗಾಗಿ ಪ್ರತಿಯೊಬ್ಬ ನಾಗರಿಕನೂ ಕಾರ್ಯಪ್ರವೃತ್ತನಾಗಬೇಕು. ಆದರೆ ನಮ್ಮ ಸಮಾಜದಲ್ಲಿ ಕೆಲವರು ಈ ದೇಶದಿಂದ ನನಗೇನು ಲಾಭ ಎಂದಷ್ಟೇ ಯೋಚಿಸುತ್ತಾರೆಯೇ ಹೊರತು ಈ ದೇಶಕ್ಕೆ ನಾನೇನು ಕೊಡುಗೆ ನೀಡಬಲ್ಲೆ ಎಂಬುದನ್ನು ಯೋಚಿಸುವುದಿಲ್ಲ. ಆದಾಗಿಯೂ ನಮ್ಮ ಸಮಾಜದಲ್ಲಿ ಹಲವು ಸಂಘ ಸಂಸ್ಥೆ ಗಳು ಸಮಾಜ ಸೇವೆ ಮಾಡುವುದರ ಮೂಲಕ ಎಷ್ಟೋ ಜನರ ಬಾಳಿಗೆ ಬೆಳಕಾಗಿ ಸಮಾಜದ ಒಳಿತಿಗಾಗಿ ಕಾರ್ಯ ನಿರ್ವಹಿಸುತ್ತಿವೆ. ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಹಲವಾರು ಸಂಘ ಸಂಸ್ಥೆಗಳಲ್ಲಿ ನಮ್ಮ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳು ಸಹ ಒಂದಾಗಿದೆ. ಸಮಸ್ತ ಕರ್ನಾಟಕದ ಸಾವಿರಾರು ಮಕ್ಕಳ ಆಶಾಕಿರಣವಾಗಿರುವ ಈ ವಿದ್ಯಾದೇಗುಲ ಕೇವಲ ಶೈಕ್ಷಣಿಕ ಸಾಧನೆಗೆ ಮಾತ್ರವಲ್ಲದೇ ಸಮಾಜಮುಖಿ ಕಾರ್ಯಗಳಲ್ಲೂ ಹೆಚ್ಚು ಗಮನ ಹರಿಸುತ್ತಾ ಬಂದಿದೆ. ನಾವು ನಮ್ಮ ಊರು, ಮನೆಗಳಲ್ಲಿ ನೆಮ್ಮದಿಯಿಂದ ಜೀವನ ನಡೆಸುತ್ತಾ ಇದ್ದೇವೆ ಎಂದಾದರೆ ಅದಕ್ಕೆ ಪ್ರಮುಖ ಕಾರಣ ನಮ್ಮ ದೇಶದ ಗಡಿ ಕಾಯುವ ಯೋಧರ ಬಲಿದಾನ. ವರ್ಷಗಟ್ಟಲೆ ಮನೆಯವರ ಸಂಪರ್ಕವೇ ಇಲ್ಲದೆ ದೇಶಕ್ಕೋಸ್ಕರ ತಮ್ಮ ಜೀವವನ್ನೇ ಮುಡಿಪಾಗಿಡುವ ಸೈನಿಕರಿಗಾಗಿ ಕಿಂಚಿತ್ತಾದರೂ ಒಳಿತು ಮಾಡಬೇಕಲ್ಲವೇ ? ಅಂತೆಯೇ ನಮ್ಮ ಜ್ಞಾನಸುಧಾ ಶಿಕ್ಷಣ ಸಂಸ್ಥೆಯು ಎರಡು ವರ್ಷಗಳಿಂದ ರಾಷ್ಟ್ರರಕ್ಷಣಾ ನಿಧಿಗೆ ತನ್ನ ಕೊಡುಗೆಯನ್ನು ನೀಡುತ್ತಾ ಬಂದಿದೆ. 2019 ನೇ ಸಾಲಿನಲ್ಲಿ NEET ಮೂಲಕ ಎಮ್.ಬಿ.ಬಿ.ಎಸ್ ಪ್ರವೇಶ ಪಡೆದ 53 ವಿದ್ಯಾರ್ಥಿಗಳ ಪರವಾಗಿ ಪ್ರತೀ ಸೀಟಿಗೆ ರೂ.2000 ದಂತೆ, 1ಲಕ್ಷದ 6ಸಾವಿರ ರೂಪಾಯಿಗಳನ್ನು ರಕ್ಷಣಾ ನಿಧಿಗೆ ನೀಡಿದ್ದರೆ, ಈ ವರ್ಷ ಇದುವರೆಗೆ ಪ್ರವೇಶ ಪಡೆದ 48 ವಿದ್ಯಾರ್ಥಿಗಳ ಪರವಾಗಿ ರೂ.96,000 ವನ್ನು ರಕ್ಷಣಾ ನಿಧಿಗೆ ನೀಡಲಾಗಿದೆ.

### ನಮ್ಮ ಕೆಡೆಟ್‌ಗಳು ನಮ್ಮ ಹೆಮ್ಮೆ





## ಹೊಸ ಹರುಷದೊಂದಿಗೆ ಹೊಸ ವರುಷ

ಎಂಟು ತಿಂಗಳ ಬಳಿಕ ಕಾಲೇಜು ಆವರಣದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಸಕಾರಾತ್ಮಕ ಮನೋಶಕ್ತಿಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಓರಿಯೆಂಟೇಶನ್ ಕಾರ್ಯಕ್ರಮವನ್ನು ಜನವರಿ ಒಂದರಂದು ಆಯೋಜಿಸಲಾಗಿತ್ತು.
ಮಕ್ಕಳನ್ನು ಶೈಕ್ಷಣಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗುವಂತೆ ಸಂಸ್ಥೆಯ ಅಧ್ಯಕ್ಷರು ತಮ್ಮ ಕಾಳಜಿಯುತ ಮಾತಿನಿಂದ ಹುರಿದುಂಬಿಸಿದರು. ಶೈಕ್ಷಣಿಕ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಯೋಜಿಸುವಲ್ಲಿ ಯಶಸ್ವಿಯಾದ ಪ್ರಾಂಶುಪಾಲರು ತಮ್ಮ ಹೊಸ ವರುಷದ ಸಂದೇಶದೊಂದಿಗೆ ಮಕ್ಕಳಿಗೆ ನವ ಚೈತನ್ಯ ತುಂಬಿದರು. ವಿದ್ಯಾರ್ಥಿಗಳು ಹೊಸ ವರುಷವನ್ನುಹೊಸ ಹರುಷದೊಂದಿಗೆ ಆರಂಭಿಸಬೇಕೆಂಬ



ಉದ್ದೇಶದಿಂದ ಕಾರ್ಕಳದ ಖ್ಯಾತ ಗಾಯಕ ಸಚಿತ್ ಪೂಜಾರಿ ನಂದಳಿಕೆಯವರಿಂದ ಗಾಯನ ಕಾರ್ಯಕ್ರಮವನ್ನು ನಡೆಸಲಾಯಿತು. ಇದರ ಜೊತೆಗೆ ಉಪನ್ಯಾಸಕ ವೃಂದದ ಪ್ರತಿಭೆಗಳು ಕೂಡ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಜೊತೆಗೆ ಮಕ್ಕಳನ್ನು ಮನರಂಜಿಸುವಲ್ಲಿಯೂ ಕಡಿಮೆ ಇಲ್ಲ ಎನ್ನುವ ರೀತಿಯಲ್ಲಿ ಪ್ರತಿಭೆಯನ್ನು ಪ್ರದರ್ಶಿಸಿದರು.



## ಜ್ಞಾನಸುಧಾದ ರಸಾಯನ ಶಾಸ್ತ್ರ ಪ್ರಾಧ್ಯಾಪಕ ಶ್ರೀ ಪ್ರಜ್ವಲ್ ಕುಲಾಲ್ ಅವರಿಗೆ ಯುವವಿಜ್ಞಾನಿ ಪ್ರಶಸ್ತಿ ಹಾಗೂ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳಿಂದ ಸನ್ಮಾನ



ರಾಜಸ್ಥಾನದ ಉದಯಪುರ ಪೆಸಿಫಿಕ್ ವಿಶ್ವವಿದ್ಯಾನಿಲಯದ ರಸಾಯನ ಶಾಸ್ತ್ರ ವಿಭಾಗವು ಅಕ್ಟೋಬರ್ 3 ಮತ್ತು 4 ರಂದು ನಡೆಸಿದ ಸ್ವಚ್ಛ ಪರಿಸರಕ್ಕಾಗಿ ಹಸಿರು ರಸಾಯನ ಶಾಸ್ತ್ರ ಎಂಬ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀ ಪ್ರಜ್ವಲ್ ಕುಲಾಲ್ ಅವರು ಮಂಡಿಸಿದ ಸಂಶೋಧನಾ ಪ್ರಬಂಧಕ್ಕೆ "ಯುವವಿಜ್ಞಾನಿ" ಪ್ರಶಸ್ತಿ ಲಭಿಸಿದೆ.
ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಇವರನ್ನು ಸನ್ಮಾನಿಸಲಾಯಿತು. ಡಾ। ಟಿ.ಎಂ.ಪೈ ರೋಟರಿ ಆಸ್ಪತ್ರೆ ಕಾರ್ಕಳದ ಆಡಳಿತಾಧಿಕಾರಿ ಡಾ। ಕೀರ್ತಿನಾಥ್ ಬಲ್ಲಾಳ್ ಅವರು ಸನ್ಮಾನ ಕಾರ್ಯಕ್ರಮ ನೆರವೇರಿಸಿ "ಯುವಕರು ಸಂಶೋಧನಾ ಪ್ರವತ್ತಿಯನ್ನು ಬೆಳೆಸಿಕೊಳ್ಳಬೇಕು. ಮಣಿಪಾಲ ಶಿಕ್ಷಣ ಸಂಸ್ಥೆಗಳು ಸಂಶೋಧನೆಗೆ ಹೆಚ್ಚು ಒತ್ತು ನೀಡುತ್ತವೆ. ಮನುಷ್ಯ ಬೆಳೆದಷ್ಟೂ ಹೊಸ ಸವಾಲುಗಳು ಹುಟ್ಟಿಕೊಳ್ಳುತ್ತವೆ ಅಂದರು. ಎ.ಪಿ.ಜಿ.ಇ,ಟಿ.ಯ ಅಧ್ಯಕ್ಷರಾದ ಡಾ। ಸುಧಾಕರ ಶೆಟ್ಟಿಯವರು ಸನ್ಮಾನ ಕಾರ್ಯಕ್ರಮ ನೆರವೇರಿಸಿ ಟ್ರಸ್ಟ್ ನ ವತಿಯಿಂದ ರೂ.ಹತ್ತು ಸಾವಿರದ ಚೆಕ್ ಅನ್ನು ನೀಡಿ ಅಭಿನಂದಿಸಿದರು.

## ಸುಸಜ್ಜಿತ ರಸಾಯನ ಶಾಸ್ತ್ರ ಪ್ರಯೋಗಾಲಯ ಉದ್ಘಾಟನೆ



ವೈಜ್ಞಾನಿಕ ಯುಗದಲ್ಲಿ ಸಂಶೋಧನಾತ್ಮಕ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಜ್ಞಾನಸುಧಾ ಶಿಕ್ಷಣ ಸಂಸ್ಥೆಯು ಸುಮಾರು 25 ಲಕ್ಷರೂಪಾಯಿ ವೆಚ್ಚದಲ್ಲಿ ಬಹು ಸುಸಜ್ಜಿತವಾದ ರಸಾಯನ ಶಾಸ್ತ್ರ ಪ್ರಯೋಗಾಲಯವನ್ನು ಸೆಪ್ಟೆಂಬರ್ 5, ಶಿಕ್ಷಕರ ದಿನಾಚರಣೆಯಂದು ಉದ್ಘಾಟಿಸಲಾಯಿತು. ಲ್ಯಾಬ್ ಎಂದರೆ ಅಡುಗೆ ಕೋಣೆ ಇದ್ದಂತೆ. ಮೂಲ ವಸ್ತುಗಳ ಭೋದನೆ ಹಾಗೂ ಅಧ್ಯಯನವೇ ರಸಾಯನಾಶಾಸ್ತ್ರದ ಉದ್ದೇಶವಾಗಿದೆ ಎಂದು ಪ್ರಯೋಗಾಲಯವನ್ನು ಉದ್ಘಾಟಿಸಿದ ಉಡುಪಿ ಜಿಲ್ಲಾ ರಸಾಯನಾಶಾಸ್ತ್ರ ಉಪನ್ಯಾಸಕರ ವೇದಿಕೆಯ ಅಧ್ಯಕ್ಷ ಹಾಗು ಪಳ್ಳಿ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಶ್ರೀ. ಪಿ. ವಸಂತ್ಆಚಾರ್ ಪ್ರಶಂಸನೀಯ ಮಾತನ್ನಾಡಿದರು. ಹಾಗೆಯೇ ಭೋದಕನಾದವನು ತಾನು ಹೊಸ ವಿಚಾರಗಳನ್ನು ಕಲಿಯುತ್ತಾ ವಿದ್ಯಾರ್ಥಿಗಳನ್ನು ಅತ್ತಕಡೆಗೆ ಉತ್ತಮ ಪ್ರಯೋಗಶಾಲಿಗಳನ್ನಾಗಿ ಮಾಡಿ ಜ್ಞಾನಧಾರೆ ಎರೆದಾಗ ವೃತ್ತಿಗೆ ಬೆಲೆ ಸಿಕ್ಕಂತೆ ಎಂದು ಶಿಕ್ಷಕರ ದಿನಾಚರಣೆಯ ಸಂದೇಶ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಅಜೆಕಾರು ಪದ್ಮಗೋಪಾಲ ಎಜ್ಯುಕೇಶನ್ ಟ್ರಸ್ಟ್ ನ ಅಧ್ಯಕ್ಷರಾದ ಸುಧಾಕರ ಶೆಟ್ಟಿಯವರು ವಿದ್ಯಾರ್ಥಿಗಳ ಬದುಕನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿರುತ್ತದೆ. ಅಂತಹ ಶಿಕ್ಷಕರು ನಾವಾಗಬೇಕು ಎಂದು ನುಡಿದರು.ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಮಾತುಗಳನ್ನಾಡಿದ ಎ.ಪಿ.ಜಿ.ಇ.ಟಿ. ಆಡಳಿತ ಮಂಡಳಿ ಸದಸ್ಯ ಶ್ರೀ ಅನಿಲ್ ಕುಮಾರ್ ಜೈನ್ , ಶಿಕ್ಷಕರ ಬೋಧನೆ ವಿದ್ಯಾರ್ಥಿಯ ಮೆದುಳಿಗೆ ತುಂಬಿಸುವುದಾಗಿರದೆ, ಅವರ ಮನಸ್ಸನ್ನು ಗೆದ್ದು ಹೃದಯವನ್ನು ತುಂಬುವ ಜ್ಞಾನಧಾರೆಯಾಗಬೇಕು ಎಂದರು.
ಕಾರ್ಯಕ್ರಮದಲ್ಲಿ ಎ.ಪಿ.ಜಿ.ಇ.ಟಿ. ಟ್ರಸ್ಟಿ ಗಳಾದ ಶ್ರೀ ಕರುಣಾಕರ ಶೆಟ್ಟಿ , ಶ್ರೀಮತಿ ವಿದ್ಯಾ ಸುಧಾಕರ ಶೆಟ್ಟಿ, ಆಡಳಿತ ಮಂಡಳಿ ಸದಸ್ಯ ಡಾ.ಪ್ರಕಾಶ್ ಶೆಣೈ, ಸಂಸ್ಥೆಯ ಹಿತೈಷಿಗಳಾದ ಶ್ರೀ ತ್ರಿವಿಕ್ರಮ ಕಿಣಿ, ಶ್ರೀ ದೇವೇಂದ್ರ ನಾಯಕ್, ಶ್ರೀ ಸುಕುಮಾರ್ ಶೆಟ್ಟಿ, ಉಭಯ ಸಂಸ್ಥೆಗಳ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ. ಕೊಡವೂರು, ಶ್ರೀಮತಿ ಉಷಾ ರಾವ್.ಯು., ಕಾರ್ಯಕ್ರಮದ ಶೋಭೆಯನ್ನು ಹೆಚ್ಚಿಸಿದರು.

## ಚಿತ್ರಕಲೆ



**Mrs. KEERTHI ACHARYA**
- Lecturer In English



**MANYA HEGDE**
- 19PCMC



**SAKSHITH**
-19EBAS



**SAMIPTHI**, 19PCMC



**SHRAVYA**, 19PCMB



**VAISHNAVI ACHARYA**
- 19PCMB



**KUSHI YASHODHARA**
Class 10th

## ಕವನ




### ಟೈಟಾನಿಕ್

ಅದೊಂದು ಊಹಿಸಲಾರದ ದಿನ
ಸಾವಿರಕ್ಕೂ ಹೆಚ್ಚು ಜನರ ನಿಧನ
ದುಡ್ಡು ಕೊಟ್ಟು ಸಾಯುವುದು ಅಂದರೆ ಇದೇನಾ?
ಇದನ್ನು ಎಣಿಸಿದರೆ ಜುಂ ಅನ್ನುತ್ತೆ ತನುಮನ
ಇನ್ನೂರು ಮೀಟರ್ ಉದ್ದದ ನೌಕಾಯಾನ
ಮುಳುಗಿ ಹೋಯಿತಲ್ಲವೇ ನಿಧಾನ?
ಟೈಟಾನಿಕ್ ಅನ್ನು ಮುಳುಗಲಾರದ ಹಡಗು ಎಂದದ್ದು ಸುಮ್ಮನೆನಾ?
ಅಷ್ಟೂ ಜನರ ಸುಂದರ ಕನಸುಗಳು ನುಚ್ಚು ನೂರಾಯಿತಲ್ಲವೇ ಆ ದಿನ?
ಮೂರು ಸಾವಿರದ ಮುನ್ನೂರು ಜನರ ಪ್ರಯಾಣ
ಸಂಬಂಧವೇ ಇಲ್ಲದ ಜನರ ಅಲ್ಲಿ ಮಿಲನ
ಎಷ್ಟೇ ಶ್ರೀಮಂತರಾದರೂ ಬರಲಿಲ್ಲ ಅವರ ಸಹಾಯಕ್ಕೆ ಧನ
ಹಿಮಗಡ್ಡೆಗೆ ಬಡಿದಾಗ ಅವರ ನೌಕಾಯಾನ
ಅವರಿಗೆಲ್ಲಾ ಕಾಡಿತ್ತು ಒಂದು ಅನುಮಾನ
ಅದೇ, ಅವರು ಬದುಕಿ ಉಳಿದಾರೆಯೇ ಮರುದಿನ?
ಕೊನೆಗೂ ಸತ್ಯವಾಗಿಬಿಟ್ಟಿತು ಅವರ ಅನುಮನ
ಅವರಿಗಾಗಿ ಇರುವ ನಾವು ಒಂದು ಕ್ಷಣ ಮೌನ
ಹಾಗಾದರೂ ಮಾಡುವ ಅವರಿಗೊಂದು ನಮನ
ಆದರೆ ಒಂದಂತೂ ಸತ್ಯ ವಚನ
ಸಾವಿನಾಚೆಗೂ ಅವರೆಲ್ಲ ಬದುಕಿರಲಿ ಎಂದು ರಚಿಸಿದೆ ಈ ಕವನ

**ವಿಜಯಲಕ್ಷ್ಮಿ. ಆರ್.ಕಾಮತ್**, 19PCMB

### ದುರಂತ 2020



ಎಲ್ಯೆ ಕೊರೋನಾ
ಕಷ್ಟ ಮಾಡಿದೆ ನೀ ನಮ್ಮ ಜೀವನ
ನಿನ್ನ ವಿರುದ್ಧ ಹೋರಾಡುವವರಿಗೆ
ನನ್ನ ಕೋಟಿ ಕೋಟಿ ನಮನ

ಮಾಸ್ಕ್ ಧರಿಸಿ ಸ್ಯಾನಿಟೈಸರ್ ಹಾಕುವಂತೆ ಮಾಡಿದೆ
ಮನೆಯಿಂದ ಹೊರಗೆ ಹೋಗದಂತೆ ಮಾಡಿದೆ
ಅನೇಕರು ತಮ್ಮ ಕೆಲಸವನ್ನು ಕಳೆದುಕೊಳ್ಳುವಂತೆ ಮಾಡಿದೆ
ಮಕ್ಕಳ ಆಟ ಪಾಠಗಳನ್ನು ಕಸಿದುಕೊಂಡೆ

ಮಾಡದ ತಪ್ಪಿಗೆ ನಮಗೇಕೆ ಈ ಶಿಕ್ಷೆ
ಮಾಡುತ್ತಿದ್ದಿ ನೀ ಜನರ ತಾಳ್ಮೆ ಪರೀಕ್ಷೆ
ಪೊಲೀಸರು ಮತ್ತು ವೈದ್ಯರು ಮಾಡುತ್ತಿದ್ದಾರೆ ನಮ್ಮ ರಕ್ಷೆ
ನನಗೆ ಸಂತೋಷ ನೋಡಲು ನೀನಿಲ್ಲದ ನಕ್ಷೆ

ಎಲ್ಲರೂ ಸೇರಿ ಕೊರೊನಾ ವಿರುದ್ಧ ಹೋರಾಡೋಣ
ಈ ರೋಗವನ್ನು ಹರಡದಂತೆ ಮಾಡೋಣ
ಒಗ್ಗಟ್ಟಿನಿಂದ ಈ ಕಷ್ಟದ ಪರಿಸ್ಥಿತಿಯನ್ನು ಎದುರಿಸೋಣ
ಪುನಃ ಆರೋಗ್ಯವಂತ ಮತ್ತು ಸುರಕ್ಷಿತ ಭಾರತ ನಿರ್ಮಾಣ ಮಾಡೋಣ

**ಉಜ್ವಲ್ ಹೆಗ್ಡೆ**, ಹತ್ತನೆ ತರಗತಿ

# Congratulations!

## Cdr ASHWIN M RAO CONFERRED WITH CNS MEDAL



Mr. Ashwin M Rao, Commander in Indian Navy who hails from Karkala, is the son of Mr. Manohar Rao and Mrs.Savithri Manohar. It is a matter of pride to note that Mr. Ashwin M Rao was a student of Dr. Sudhakar Shetty, the President of APGET, while he was studying PU at Nitte.

He was commissioned in Indian Navy as Sub lieutenant on 7 February 2005.He pursued M.Sc. in Electronics and Telecommunications from CUSAT, Kochi during 2006-07. He was later on selected for Naval Aviation in the technical mainstream where he specialised in Sea Harrier and Kirans of Indian Navy and also obtained M.Tech in Aeronautical Technology at CUSAT,Kochi.During 2013,he was selected to do M.Tech in Computer Science Engineering at IIT Kanpur. Post completion of M.Tech he was deputed to DRDO,WESEE, Delhi to handle various projects pertaining to Indian Naval Aviation. During August 2016 he undertook the command of ELECTRICAL OFFICER duties of INS SHARADA and carried out major exercises for Indian Navy both in Indian and International waters and during April 2017, played a major role in rescue operation and saved four lives and a cargo ship which was attacked by the Somalian pirates. On7 June 2017, he got promoted to the rank of Commander and later in January 2018 was transferred to Naval Institute of Aeronautical Technology (NIAT), Kochi for instructional duties. Later in 2019 he took over as the Head of Electrical Department chair and handled all the aspects of training related to basic subjects of electrical,radio,communication and missiles and also gave training on various aircraft operated by Indian Navy .The gallant son of India,Commander Ashwin M Rao has received the Chief of Naval Staff Commendation on Naval Day,4 December 2020 for his innovations and indigenisation projects,technology demonstrations and training solutions for Indian Naval Aviation.His innovations are based on emerging technologies like Artificial Intelligence, Augmented Reality,Virtual Reality, Sensor Integrations, Internet of Things and Image Processing.

**Jnanasudha family congratulates and salutes this versatile personality for all his incredible achievements.**

## ಎನ್.ಸಿ.ಸಿ. ಉದ್ಘಾಟನಾ ಸಮಾರಂಭ

ಸಂಕಲ್ಪ ಶುದ್ಧವಿದ್ದರೆ ಸಂಕಲ್ಪ ಸಿದ್ದಿಯಾಗುವುದು ಎಂಬ ಗಾದೆ ಮಾತು ಅಕ್ಷರಶ: ನಿಜ. ಏಕೆಂದರೆ 2020 ನೇ ವರ್ಷ ನಮ್ಮೆಲ್ಲರ ಪಾಲಿಗೆ ಕಹಿ ದಿನಗಳಾದರೂ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿಗೆ ಅಂದು ಅತ್ಯಂತ ಹರುಷದ ದಿನ. ಅಜೆಕಾರ್ ಪದ್ಮ ಗೋಪಾಲ್ ಎಜುಕೇಶನ್ ಟ್ರಸ್ಟ್ ನ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿ ಯವರ ಬಹು ದಿನದ ಕನಸು ನನಸಾದ ಕ್ಷಣ. ಅಧ್ಯಕ್ಷರ ಶುದ್ಧ ಸಂಕಲ್ಪ ಹಾಗು ಉತ್ತಮ ಸಹಕಾರ ದೊಂದಿಗೆ ಎನ್.ಸಿ.ಸಿ ಅಧಿಕಾರಿ ಯಾಗಿರುವ ಶ್ರೀ ಸುಮಿತ್ ಅವರ ಸತತ ಪರಿಶ್ರಮದ ಫಲವಾಗಿ ಇಂದು ನಮ್ಮ ಪ.ಪೂ. ಕಾಲೇಜಿನಲ್ಲಿ ಎನ್.ಸಿ.ಸಿ. ಸೀನಿಯರ್ ಘಟಕವನ್ನು ಆರಂಭಿಸಲು ಹಸಿರು ನಿಶಾನೆ ಸಿಕ್ಕಂತಾಗಿದೆ. ಹೌದು ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿಗೆ ಅನುದಾನ ರಹಿತ ಪದವಿ ಪೂರ್ವ ಕಾಲೇಜೊಂದಕ್ಕೆ ಮಾತ್ರ ಎನ್.ಸಿ.ಸಿ. ಸೀನಿಯರ್ ಘಟಕ ಆರಂಭಿಸಲು ಅನುಮತಿ ದೊರಕಿದ ದಿನ. ಅಂತೆಯೇ 2021 ಜನವರಿ 26 ರ ಗಣರಾಜ್ಯೋತ್ಸವದ ಶುಭ ದಿನದಂದು ಕಾಲೇಜಿನ ಕ್ರೀಡಾಂಗಣದಲ್ಲಿ ಎನ್.ಸಿ.ಸಿ. ಸೀನಿಯರ್ ಘಟಕವನ್ನು ಉದ್ಘಾಟಿಸಲಾಗುವುದು.

**ಕಾರ್ಯಕ್ರಮಕ್ಕೆ ಈ ಕೆಳಗಿನವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.**

- **CAPTAIN GANESH KARNIK** (Former M.L.C, Government of Karnataka)
- **BRIGEDIER PURVIMATH. V.S.M** (Former D.D.G, Karnataka-Goa Directorate)
- **COL. BHADRI PRASAD** (Commanding Officer 21-Karnataka Dn NCC, Udupi)

## ಸಂಪಾದಕೀಯ

ಪ್ರಿಯ ಓದುಗ,

ಪ್ರಸಿದ್ದ ಕವಿ ಡಿ.ವಿ.ಜಿ.ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ,"ಬದುಕಿಗಾರು ನಾಯಕರು?" ಎಂದು ಪ್ರಶ್ನೆ ಮಾಡುತ್ತಾ "ಕುದುರುವುದೆಂತು ಈ ಅವ್ಯವಸ್ಥೆಯ ಪಾಡು? ಆದಿಗುದಿ (ತಳಮಳ)ವೇ ಗತಿಯೇನೋ?" ಎಂಬ ನೋವನ್ನು ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯ ಎಷ್ಟು ಸತ್ಯ!. ಇಲ್ಲಿಯವರೆಗೆ ಈ ಭೂಮಿಗೆ ನಾವೇ ನಾಯಕರು, ನಾವು ಬಳಸಿ ಉಳಿದದ್ದು ಇತರ ಜೀವಿಗಳಿಗೆ, ಎಂದು ಬೀಗುತ್ತಿದ್ದ ನಾವೆಲ್ಲಾ, ಕಣ್ಣಿಗೆ ಕಾಣದ ಸೂಕ್ಷ್ಮಾಣುವಿನ ಕೈಯಲ್ಲಿ ತಿರುಗುವ ಬುಗರಿಗಳಾಗಿದ್ದೇವೆ. ವಿಶ್ವವನ್ನೇ ಆಳುವ ಕನಸು ಹೊತ್ತು ತಿರುಗುತ್ತಿದ್ದ ಮಾನವ, ಈ ಭೂಮಿಯ ಮೇಲೆ ತಾನು ಇನ್ನೆಷ್ಟು ಸಮಯ ಕಳೆಯಲಿಕ್ಕಿದ್ದೇನೆ ? ಎನ್ನುವ ಉತ್ತರವಿರದ ಪ್ರಶ್ನೆಯ ಸುತ್ತ ಗಿರಕಿ ಹೊಡೆಯುತ್ತಿದ್ದಾನೆ. ಏನೇ ಆದರೂ ಬದುಕಿನಲ್ಲಿ "ಧನಾತ್ಮಕತೆ" ಎನ್ನುವುದು ನಮ್ಮ ಮುನ್ನಡೆಸುವ ಸಂಜೀವಿನಿ.

"ಜ್ಞಾನಸುಧಾ" ಬಳಗವು ಕೋವಿಡ್ ಮಹಾಮಾರಿಯ ಅನಿಶ್ಚಿತತೆಯ ದಿನಗಳನ್ನು ಧನಾತ್ಮಕವಾಗಿಯೇ ಕಳೆದಿದೆ. ವಿದ್ಯಾರ್ಥಿಗಳ ಪರೀಕ್ಷಾ ತಯಾರಿಗೆ ಬೇಕಾಗುವ ನೋಟ್ಸ್‌ಗಳನ್ನು ಪ್ರಾಧ್ಯಾಪಕರುಗಳು ತಯಾರಿಸಿ, ಅದನ್ನೆಲ್ಲಾ ಅಂದವಾಗಿ ಅಚ್ಚು ಹಾಕಿಸಿ, ರಾಜ್ಯದ ಮೂಲೆ ಮೂಲೆಗಳಲ್ಲಿರುವ ವಿದ್ಯಾರ್ಥಿಗಳ ಮನೆಗೆ ತಲುಪಿಸಲಾಯಿತು. ಆನ್‌ಲೈನ್ ತರಗತಿಗಳು ಪರಿಣಾಮಕಾರಿಯಾಗಿ ಆಗುವರೆ, ಪ್ರತಿಷ್ಠಿತ IMPARTUS ಸಂಸ್ಥೆಯ ಸಹಯೋಗದೊಂದಿಗೆ, ಪ್ರತಿ ತರಗತಿಗಳನ್ನೂ ವಿದ್ಯಾರ್ಥಿಗಳು ಪುನಃ ಮನನ ಮಾಡಲು ಸಹಾಯವಾಗುವಂತಹ ಬ್ಯಾಕ್‌ಪ್ಯಾಕ್ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ರಾಜ್ಯದ ಎಲ್ಲಾ ಆಸಕ್ತ ವಿದ್ಯಾರ್ಥಿಗಳಿಗೆ ನೆರವಾಗುವ ನಿಟ್ಟಿನಲ್ಲಿ JNANASUDHA ONLINE TEST SERIES ನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ವಿದ್ಯಾಕ್ಷೇತ್ರದಲ್ಲಿ ನಮ್ಮ ವಿದ್ಯಾರ್ಥಿಗಳ ಸಾಧನೆಯ ನೆನಪು ಅಚ್ಚಳಿಯದೆ ಉಳಿಯಬೇಕು ಎನ್ನುವ ನಿಟ್ಟಿನಲ್ಲಿ ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಹಮ್ಮಿಕೊಳ್ಳಲಿರುವ ಹಲವಾರು ಯೋಜನೆಗಳಿಗೆ ರೂಪುರೇಷೆ ಸಿದ್ಧವಾಗುತ್ತಿದೆ. ಜ್ಞಾನಸುಧಾದ ಹೈಸ್ಕೂಲ್ ವಿಭಾಗಕ್ಕೆ 'ಅಟಲ್ ಟಿಂಕರಿಂಗ್ ಲ್ಯಾಬ್' ದೊರೆತಿರುವುದರಿಂದ ವಿದ್ಯಾರ್ಥಿಗಳಿಗೆ ಇನ್ನಷ್ಟು ಉಪಯೋಗವಾಗಲಿದೆ. ಜ್ಞಾನಸುಧಾದ ಈ ಮಣ್ಣಿನಲ್ಲಿ ದೇಶ ಕಟ್ಟುವ ಕಾಯಕದಲ್ಲೂ ನಾವು ತೊಡಗಿದ್ದೇವೆ. ದೇಶದ ಪ್ರತಿಷ್ಠಿತ NCCಯ ಸೀನಿಯರ್ ವಿಂಗ್ ನಮ್ಮ ಪಿ.ಯು.ಕಾಲೇಜಿನಲ್ಲಿ ಆರಂಭವಾಗುತ್ತಿರುವುದು ನಮಗೆಲ್ಲಾ ಬಹಳ ಹೆಮ್ಮೆ. ಇದೆಲ್ಲದರ ಮೂಲ ಉದ್ದೇಶ ಸ್ವಾಸ್ಥ್ಯಭರಿತ ಸಮಾಜದ ನಿರ್ಮಾಣ. ನಮ್ಮ ಈ ಉದ್ದೇಶಕ್ಕೆ ನಿಮ್ಮೆಲ್ಲರ ತುಂಬು ಮನಸ್ಸಿನ ಹಾರೈಕೆಯಿರಲಿ.

– ಸಂಪಾದಕರು

**ಸಂಪಾದಕರು**

'ಜ್ಞಾನಸುಧಾ' ಪತ್ರಿಕೆ, ಗಣಿತ ನಗರ, ಕುಕ್ಕುಂದೂರು
ಕಾರ್ಕಳ – 575117, ಉಡುಪಿ ಜಿಲ್ಲೆ

ಸಂದೇಶ

<JNANASUDHA><NAME><PLACE>
<MESSAGE>
to
9019736528

Ph: 08258-298455, 298655
Email:jnanasudha@gmail.com

**'ನಹಿ ಜ್ಞಾನೇನ ಸದೃಶಂ' – ಜ್ಞಾನಸುಧಾದ ನಡಿಗೆ ಜ್ಞಾನದೆಡೆಗೆ**

Printed & Published by AJEKAR PADMA GOPAL EDUCATION TRUST, 'Padma Gopal', Joduraste, Karkala - 576 117
Editorial Board : Principal, KJSPUC & KJSEMHS, Mrs. Jyothi Padmanabha, Mr. Manjunath. *Designed* @ RAJ Graphics, Hirebettu
Editorial Office : KARKALA JNANASUDHA P.U. COLLEGE, GANIT NAGAR, KUKKUNDOOR, KARKALA - 576 117, Email : jnanasudha@gmail.com Ph: 08258-298455, 298655